ಸಂಪುಟ 01 | ಸಂಚಿಕೆ 187 | ಸೋಮವಾರ 01 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಹಾಲು ದಿನ** (World Milk Day)
ಪ್ರತಿ ವರ್ಷ ಜೂನ್ 1 ರಂದು ವಿಶ್ವ ಹಾಲು ದಿನವನ್ನು ಆಚರಿಸಲಾಗುತ್ತದೆ.
ಹಾಲಿನ ಪೌಷ್ಟಿಕಾಂಶ, ಆರೋಗ್ಯದಲ್ಲಿ ಅದರ ಮಹತ್ವ ಹಾಗೂ ಹೈನುಗಾರಿಕೆ ಕ್ಷೇತ್ರದ ಕೊಡುಗೆಯನ್ನು ಜನರಿಗೆ ತಿಳಿಸುವುದು ಇದರ ಉದ್ದೇಶ.
ಈ ದಿನವನ್ನು 2001ರಲ್ಲಿ Food and Agriculture Organization (FAO) ಆರಂಭಿಸಿತು.

**2) ಜಾಗತಿಕ ಪೋಷಕರ ದಿನ** (Global Day of Parents)
ಪೋಷಕರ ಪ್ರೀತಿ, ತ್ಯಾಗ ಮತ್ತು ಮಕ್ಕಳ ಬೆಳವಣಿಗೆಯಲ್ಲಿ ಅವರ ಅಮೂಲ್ಯ ಪಾತ್ರವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ.
ಕುಟುಂಬದ ಮೌಲ್ಯಗಳನ್ನು ಉತ್ತೇಜಿಸುವ ಉದ್ದೇಶದಿಂದ United Nation ಈ ದಿನವನ್ನು ಘೋಷಿಸಿದೆ.

## ಸುಭಾಷಿತ

ಅಕಾರವಿಲ್ಲದ ನಿರಾಕಾರ ಲಿಂಗವ ಕೈಯಲ್ಲಿ ಹಿಡಿದು ಕಟ್ಟಿದವೆಂಬರು ಅಜ್ಞಾನಿಜೀವಿಗಳು.

–ಅಕ್ಕಮಹಾದೇವಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಈ ಸಲಾನು ಕಪ್ ನಮ್ಮದೇ

## ಎರಡನೇ ಬಾರಿ ಚಾಂಪಿಯನ್ ಆಗಿ ಮತ್ತೆ ಕಪ್ ಎತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು

◆ ನೈಜ್ಯ ದೆಸೆ ನ್ಯೂಸ್




ಅಹಮದಾಬಾದ್: ಐಪಿಎಲ್ ಇತಿಹಾಸದಲ್ಲಿ ಆರ್‌ಸಿಬಿಯ ಸುವರ್ಣ ಅಧ್ಯಾಯ ಬರೆದಿದೆ “ಈ ಸಲ ಕಪ್ ನಮ್ಮದು” ಎನ್ನುವ ಘೋಷಣೆ ಈಗ “ಮತ್ತೆ ಕಪ್ ನಮ್ಮದು” ಎಂದು ಮೊಳಗಿದೆ.ಭಾರತದ ಅತಿ ದೊಡ್ಡ ಕ್ರಿಕೆಟ್ ಹಬ್ಬವಾದ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮತ್ತೊಮ್ಮೆ ತನ್ನ ಪ್ರಾಬಲ್ಯವನ್ನು ಸಾಬೀತುಪಡಿಸಿ ಎರಡನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಕಳೆದ ವರ್ಷ ಮೊದಲ ಬಾರಿಗೆ ಟ್ರೋಫಿ ಗೆದ್ದು ಇತಿಹಾಸ ನಿರ್ಮಿಸಿದ್ದ ಆರ್‌ಸಿಬಿ, ಈ ಬಾರಿ ಕೂಡ ಅದ್ಭುತ ಪ್ರದರ್ಶನ ನೀಡಿ ಸತತ ಎರಡನೇ ಬಾರಿ ಕಪ್ ಗೆಲ್ಲುವ ಮೂಲಕ ಹೊಸ ದಾಖಲೆ ಬರೆದಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನ ಅನುಭವ, ಆತ್ಮವಿಶ್ವಾಸ ಹಾಗೂ ಸಮೂಹ ಆಟದ ಬಲದಿಂದ ಎದುರಾಳಿ ತಂಡದ ಮೇಲೆ ಸಂಪೂರ್ಣ ಮೇಲುಗೈ ಸಾಧಿಸಿತು. ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳು ತಂಡಕ್ಕೆ ಭದ್ರ ಅಡಿಪಾಯ ಹಾಕಿದರೆ, ಬೌಲರ್‌ಗಳು ಎದುರಾಳಿಯ ರನ್‌ಗಳ ವೇಗವನ್ನು ನಿಯಂತ್ರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು.ತಂಡದ ನಾಯಕ ರಜತ್ ಪಾಟೀದಾರ್ ಅವರ ಸಮರ್ಥ ನಾಯಕತ್ವ ಹಾಗೂ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಅವರ ಅನುಭವ ತಂಡಕ್ಕೆ ದೊಡ್ಡ ಬಲವಾಯಿತು. ಇಡೀ ಟೂರ್ನಿಯಲ್ಲಿ ಸ್ಥಿರ ಪ್ರದರ್ಶನ ನೀಡಿದ ಆರ್‌ಸಿಬಿ ಲೀಗ್ ಹಂತದಿಂದಲೇ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಗುರುತಿಸಿಕೊಂಡಿತ್ತು. ಕ್ವಾಲಿಫಯರ್ 1 ನಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಭರ್ಜರಿ ಜಯ ಸಾಧಿಸಿ ನೇರವಾಗಿ ಫೈನಲ್ ಪ್ರವೇಶಿಸಿದ್ದ ಬೆಂಗಳೂರು ಪಡೆ, ಫೈನಲ್‌ನಲ್ಲೂ ಅದೇ ಜೋಷ್ ಮುಂದುವರಿಸಿ ಕಪ್ ತನ್ನದಾಗಿಸಿಕೊಂಡಿತು.ಈ ಗೆಲುವಿನೊಂದಿಗೆ ಆರ್‌ಸಿಬಿ ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವೆಡೆ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ, ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ವಿಜಯೋತ್ಸವ ಆಚರಿಸಿದರು. ಹಲವು ವರ್ಷಗಳ ನಿರೀಕ್ಷೆಯ ಬಳಿಕ ಆರಂಭವಾದ ಟ್ರೋಫಿ ಯಾತ್ರೆ ಇದೀಗ ಸತತ ಎರಡನೇ ಪ್ರಶಸ್ತಿಯೊಂದಿಗೆ ಇನ್ನಷ್ಟು ಭವ್ಯವಾಗಿದ್ದು, ಆರ್‌ಸಿಬಿ ತಂಡ ಐಪಿಎಲ್‌ನ ಶಕ್ತಿಶಾಲಿ ತಂಡಗಳ ಸಾಲಿನಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿದೆ.“ನಮ್ಮ ಕನಸು ಮಾತ್ರವಲ್ಲ, ನಮ್ಮ ಹೆಮ್ಮೆ ಕೂಡ  ಆರ್‌ಸಿಬಿ ಮತ್ತೆ ಚಾಂಪಿಯನ್!”ಮತ್ತೆ ಈ ಸಲಾನು ಕಪ್ ನಮ್ಮದೇ




# ವಶಿಷ್ಠಧಾಮದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಸಾಧಕರಿಗೆ ಸನ್ಮಾನ

◆ ನೈಜ್ಯ ದೆಸೆ ನ್ಯೂಸ್




ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಗಳು ಸದಾ ಚಲಾವಣೆಯಲ್ಲಿರಬೇಕಾದರೆ ಅದಕ್ಕೆ ಪೂರಕವಾದ ಕಾರ್ಯಕ್ರಮಗಳು ಜರುಗಬೇಕು. ಅಲ್ಲದೇ ಎಲೆಯ ಮರೆಯ ಕಾಯಿಯಂತಿರುವ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಗೌರವಿಸುವುದರಿಂದ ಅವರ ಸಾಧನೆಗೆ ಹಾಗೂ ಮುಂದಿನ ಸಾಮಾಜಿಕ ಚಿಂತನೆಗೆ ಕಾರಣವಾಗುವುದು ಎಂದು ವಶಿಷ್ಠಧಾಮ ಸೇವಾ ಟ್ರಸ್ಟ್ ಅಧ್ಯಕ್ಷರಾದ ಭೀಮಸೇನಾಚಾರ್ಯ ನವಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಸಿಂಧನೂರು ನಗರದ ಉಪ್ಪಾರವಾಡಿಯಲ್ಲಿರುವ ವಶಿಷ್ಠಧಾಮದಲ್ಲಿ ಜರುಗಿದ ಅಧಿಕಮಾಸದ ಸಾಮೂಹಿಕ ಸತ್ಯನಾರಾಯಣ ಪೂಜೆ, ಕುಮಾರಿ ಪೂಜೆ ಹಾಗೂ ವಶಿಷ್ಠಧಾಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ವಶಿಷ್ಠಧಾಮದಿಂದ ಶಿಕ್ಷಣ ಕ್ಷೇತ್ರ, ಸಾಮಾಜಿಕ ಸೇವೆ, ಕಲಾಸೇವೆ, ಸಂಗೀತ ಸೇವೆ ಹಾಗೂ ಬಾಲಪ್ರತಿಭೆಗಳನ್ನು ವಶಿಷ್ಠಧಾಮ ಪ್ರಶಸ್ತಿ ಪ್ರದಾನ ಆಯ್ಕೆ ಮಾಡುವ ಮೂಲಕ ಸದಾ ಸಾಮಾಜಿಕ ಚಿಂತನೆಯ ಜೊತೆ ಜೊತೆಗೆ ಸನಾತನ ಧರ್ಮ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಪ್ರತಿ ತಿಂಗಳು ಮಾಡಲಾಗುತ್ತಿದೆ ಎಂದರು. ಅತಿಥಿಗಳಾಗಿ ಆಗಮಿಸಿದ ಲಕ್ಷ್ಮಣರಾವ್ ಕುಲಕರ್ಣಿ ಮಾತನಾಡಿ ವಶಿಷ್ಠಧಾಮದಿಂದ ಆಚರಿಸುತ್ತಿರುವ ಕಾರ್ಯಕ್ರಮಗಳು ಮಕ್ಕಳಿಗೆ, ಭಜನಾ ಮಂಡಳಿಯವರಿಗೆ ಸಾಮಾಜಿಕ ಸೇವಾಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಅನೇಕ ವರ್ಷಗಳಿಂದ ಮಾಡುತ್ತಿರುವ ನಿಶ್ಕಾಮ್ ಸೇವೆಯಾಗಿದೆ. ಯಾವುದೇ ಅಪೇಕ್ಷೆಯಿಲ್ಲದೆಯೇ ಇಂತಹ ಕಾರ್ಯಕ್ರಮಗಳು ಸಮಾಜದ ಶ್ಲಾಘನೀಯವಾಗಿದೆ ಎಂದರು.ಶಿಕ್ಷಣ ಸೇವೆಯಲ್ಲಿ ಗಣನೀಯ ಸೇವೆಸಲ್ಲಿಸಿದ ಎಸ್.ಪಿ ವಿಷ್ಣುವರ್ಧನ ರೆಡ್ಡಿ ಶ್ರೀಮತಿ ಬಿ.ಸತ್ಯವತಿ, ಸಾಮಾಜಿಕ ಸೇವೆಯಲ್ಲಿ ನಿರಂತರವಾಗಿ ಚಟುವಟಿಕೆಯಲ್ಲಿರುವ ಶ್ರೀ ಅಶೋಕ ನಲ್ಲ ಹಾಗೂ ಶ್ರೀಮತಿ ಊರ್ಮಿಳಾ ದಂಪತಿಗಳಿಗೆ ವಶಿಷ್ಠಧಾಮ ಆದರ್ಶ ದಂಪತಿಗಳು ಪ್ರಶಸ್ತಿ, ಅಮೃತ್ ಬದಿ ಟ್ಯಾಟೋ ಕಲಾವಿದರು ಇವರಿಗೆ ವಶಿಷ್ಠಧಾಮ ಕಲಾರತ್ನ ಪ್ರಶಸ್ತಿ, ಜೀ.ಟೀವಿಯ ಗಾಯನ ಬಾಲಪ್ರತಿಭೆ ಸ್ವರಾ ಜೋಶಿ ವಶಿಷ್ಠಧಾಮ ಬಾಲಸಂಗೀತ ರತ್ನ ಪ್ರಶಸ್ತಿ ಹಾಗೂ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ 2026 ಅಚಿವರ ಪ್ರಶಸ್ತಿ ಪಡೆದ ಕು.ಶ್ರೀರಕ್ಷ ಕುಲಕರ್ಣಿ ವಶಿಷ್ಠ ಬಾಲಪ್ರತಿಭೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಕುಮಾರಿ ಪೂಜಾ ಧಾರ್ಮಿಕ ಕಾರ್ಯಕ್ರಮಗಳನ್ನು ಭಾರದ್ವಾಜ ಉಪ್ಪಳ ನೇರವೇರಿಸಿದರು. ಕಾರ್ಯಕ್ರಮದ ಸ್ವಾಗತ ಭಾಷ ಪ್ರಶಾಂತ ಕುಲಕರ್ಣಿ, ಪ್ರಾರ್ಥನಾ ಗೀತೆ ಪ್ರತಿಭಾ ಕುಲಕರ್ಣಿ ನಿರೂಪಣೆಯನ್ನು ಪಾಂಡುರಂಗ ದೇಸಾಯಿ ನೇರವೇರಿಸಿದರು. ವೆಂಕಟೇಶಪ್ಪ, ಜಯತೀರ್ಥ ದಾಸ ವೆಲಕಟೇಶ ಶ್ರೇಷ್ಠ ಕನ್ನಾರಿ, ಮಲ್ಕಾಪುರ ರಾಘವೇಂದ್ರ ಶ್ರೇಷ್ಠ, ವರದರಾಜ ಶ್ರೇಷ್ಠ ಅರಳಹಳ್ಳಿ ಮಹಿಳಾ ಭಜನಾ ಮಂಡಳಿಯ ಈರಮ್ಮ ಪದ್ಮಾವತಿ, ಶೋಭಾ ಕವಲಿ, ಲಕ್ಷ್ಮೀದೇವಿ, ಹಾಗೂ ಕಮಲಮ್ಮ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

# ಸ್ವಯಂಪ್ರೇರಿತ ಶಿಕ್ಷಣ ಸೇವೆ: ಗ್ರಾಮ ಗ್ರಾಮಕ್ಕೆ ತೆರಳಿ ಸರಕಾರಿ ಪಿಯು ಕಾಲೇಜಿಗೆ ವಿದ್ಯಾರ್ಥಿಗಳ ಆಹ್ವಾನ

◆ ನೈಜ್ಯ ದೆಸೆ ನ್ಯೂಸ್



ಬಳಗಾನೂರು, 2026–27ನೇ ಶೈಕ್ಷಣಿಕ ಸಾಲಿನಿಂದ ಬಳಗಾನೂರಿನಲ್ಲಿ ನೂತನವಾಗಿ ಆರಂಭವಾಗಿರುವ ಸರಕಾರಿ ಪದವಿಪೂರ್ವ ಕಾಲೇಜಿನ ದಾಖಲಾತಿಗಾಗಿ ಪಟ್ಟಣದ ಮುಖಂಡರು ಹಾಗೂ ಶಿಕ್ಷಣ ಪ್ರೇಮಿಗಳು ಕಳೆದ ಒಂದು ವಾರದಿಂದ ಸುತ್ತಮುತ್ತಲಿನ ಗ್ರಾಮಗಳು ಮತ್ತು ಕ್ಯಾಂಪ್ ಪ್ರದೇಶಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಕಾಲೇಜಿಗೆ ಆಹ್ವಾನಿಸುತ್ತಿರುವುದು ಗಮನಾರ್ಹವಾಗಿದೆ. ಅದರ ಭಾಗವಾಗಿ ರವಿವಾರ ಬೆಳಿಗ್ಗೆ ಪಟ್ಟಣ ಪಂಚಾಯ್ತಿಯ ಉಪಾಧ್ಯಕ್ಷ ಹುಸೇನ್ ಭಾಷಾ ಬೂದಗುಂಪ, ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ಮುಖಂಡರಾದ ಸಂಜಯ್ ಶೇಟ್, ಬಸವರಾಜ ಅಂಬ್ಲಿ,ಅಯ್ಯಪ್ಪ ಕಿನ್ನಾಳ್, ಉಪನ್ಯಾಸಕರಾದ ನಾಗಯ್ಯ ಗಣಾಚಾರಿ, ಗೋವಿಂದರಡ್ಡಿ ಗದ್ದಿ ಹಾಗೂ ಸುರೇಶ ಬಳಗಾನೂರು ಅವರು ಬೆಳ್ಳಿಗನೂರು, ಬುದ್ದಿನ್ನಿ ಹಾಗೂ ಸಾಗರ ಕ್ಯಾಂಪ್ ಗ್ರಾಮಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಪಾಲಕರಿಗೆ ಸರಕಾರಿ ಕಾಲೇಜಿನ ಮಹತ್ವದ ಕುರಿತು ಮಾಹಿತಿ ನೀಡಿದರು.ಸರಕಾರಿ ಕಾಲೇಜಿನಲ್ಲಿ ಲಭ್ಯವಾಗುವ ಉಚಿತ ಹಾಗೂ ಗುಣಮಟ್ಟದ ಶಿಕ್ಷಣ, ಅನುಭವೀ ಉಪನ್ಯಾಸಕರು, ಸರ್ಕಾರದ ವಿವಿಧ ಸೌಲಭ್ಯಗಳು ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ದೊರೆಯುವ ಅನುಕೂಲಗಳ ಕುರಿತು ವಿವರವಾಗಿ ತಿಳಿಸಿ ವಿದ್ಯಾರ್ಥಿಗಳನ್ನು ಪಟ್ಟಣದ ಸರಕಾರಿ ಪಿಯು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಮನವರಿಕೆ ಮಾಡಿದರು. ಈ ವೇಳೆ ಆಯಾ ಗ್ರಾಮಗಳ ಗ್ರಾಮಸ್ಥರು ಸಹ ಉತ್ತಮ ಸ್ಪಂದನೆ ವ್ಯಕ್ತಪಡಿಸಿ ತಮ್ಮ ಮಕ್ಕಳನ್ನು ಬಳಗಾನೂರಿನ ಸರಕಾರಿ ಪಿಯು ಕಾಲೇಜಿಗೇ ದಾಖಲಿಸಲು ಸಮ್ಮತಿಸಿದರು ಎಂದು ತಿಳಿದುಬಂದಿದೆ. ಖಾಸಗಿ ಕಾಲೇಜುಗಳ ಪ್ರಾಚಾರ್ಯರು ಮತ್ತು ಉಪನ್ಯಾಸಕರು ಪ್ರಚಾರಕ್ಕಾಗಿ ಗ್ರಾಮಗಳಿಗೆ ತೆರಳುವುದು ಸಾಮಾನ್ಯ. ಆದರೆ ಸರಕಾರಿ ಪಿಯು ಕಾಲೇಜಿನ ಅಭಿವೃದ್ಧಿ ಹಾಗೂ ದಾಖಲಾತಿ ಹೆಚ್ಚಳಕ್ಕಾಗಿ ಊರಿನ ಮುಖಂಡರು ಮತ್ತು ಶಿಕ್ಷಣ ಪ್ರೇಮಿಗಳು ಸ್ವಯಂಪ್ರೇರಿತವಾಗಿ, ಸ್ವಂತ ಖರ್ಚಿನಲ್ಲಿ ಗ್ರಾಮಗಳಿಗೆ ತೆರಳಿ ವಿದ್ಯಾರ್ಥಿಗಳನ್ನು ಆಹ್ವಾನಿಸುತ್ತಿರುವುದು ಬಳಗಾನೂರಿನ ಜನರಿಗೆ ಶಿಕ್ಷಣದ ಮೇಲೆ ಹಾಗೂ ತಮ್ಮ ಊರಿನ ಅಭಿವೃದ್ಧಿಯ ಮೇಲೆ ಇರುವ ಅಭಿಮಾನವನ್ನು ತೋರಿಸುತ್ತದೆ. ಇದಲ್ಲವೇ ಶಿಕ್ಷಣ ಪಸರಿಸುವ ಪರಿ?” ಎಂಬ ಮಾತು ಗ್ರಾಮಸ್ಥರ ನಡುವೆ ಕೇಳಿಬಂದಿತು.

## ಹಿಂದುಳಿದ ವರ್ಗಗಳ ಧ್ವನಿಗೆ ಸಚಿವ ಸ್ಥಾನ ನೀಡಿ: ಡಿ.ಟಿ. ಶ್ರೀನಿವಾಸ್ ಪರ ಮಲ್ಲಿಕಾರ್ಜುನ ಯಾದವ್ ಆಗ್ರಹ

◆ ನೈಜ್ಯ ದೆಸೆ ನ್ಯೂಸ್



ವಿಧಾನ ಪರಿಷತ್ ಸದಸ್ಯರಾದ ಡಿ.ಟಿ. ಶ್ರೀನಿವಾಸ್ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಮಸ್ಕಿ ತಾಲೂಕು ಯಾದವ ಸಮಾಜದ ಉಪಾಧ್ಯಕ್ಷ ಮಲ್ಲಿಕಾರ್ಜುನ ಹೆಚ್ ಯಾದವ್ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.ಈ ಕುರಿತು ಪ್ರಕಟಣೆ ನೀಡಿರುವ ಅವರು,ಯಾದವ ಸಮಾಜದ ರಾಜ್ಯಾಧ್ಯಕ್ಷರು ಹಾಗೂ ಪ್ರವರ್ಗ–1 ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷರಾಗಿರುವ ಡಿ.ಟಿ. ಶ್ರೀನಿವಾಸ್ ಅವರು ಕಳೆದ ಎರಡು ದಶಕಗಳಿಂದ ಹಿಂದುಳಿದ ವರ್ಗಗಳ ಶಿಕ್ಷಣ, ಉದ್ಯೋಗ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ನಿರಂತರ ಹೋರಾಟ ನಡೆಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ ಸುಮಾರು 40 ಲಕ್ಷ ಯಾದವ ಸಮುದಾಯದ ಜನರು ಹಾಗೂ 2.5 ಕೋಟಿ ಪ್ರವರ್ಗ–1 ಸಮುದಾಯದ ಜನರಿಗೆ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗದಿರುವುದು ಬೇಸರದ ಸಂಗತಿ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಡಿ.ಟಿ. ಶ್ರೀನಿವಾಸ್ ಅವರ ಅನುಭವ, ಸಾಮಾಜಿಕ ಕಳಕಳಿ ಹಾಗೂ ಹೋರಾಟದ ಮನೋಭಾವವನ್ನು ಪರಿಗಣಿಸಿ ಸಚಿವ ಸ್ಥಾನ ನೀಡಿದರೆ ಅದು ಕೇವಲ ಒಬ್ಬ ವ್ಯಕ್ತಿಗೆ ಸಿಗುವ ಗೌರವವಲ್ಲ, ಇಡೀ ಹಿಂದುಳಿದ ವರ್ಗಗಳಿಗೆ ದೊರೆಯುವ ನ್ಯಾಯ ಮತ್ತು ಗೌರವವಾಗಲಿದೆ ಎಂದು ಹೇಳಿದ್ದಾರೆ.ಮುಖ್ಯಮಂತ್ರಿಗಳು ಕೂಡಲೇ ಈ ಕುರಿತು ಸಕಾರಾತ್ಮಕ ನಿರ್ಧಾರ ಕೈಗೊಂಡು ಡಿ.ಟಿ. ಶ್ರೀನಿವಾಸ್ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆಗೊಳಿಸಬೇಕು ಎಂದು ಮಲ್ಲಿಕಾರ್ಜುನ ಹೆಚ್ ಯಾದವ್ ಆಗ್ರಹಿಸಿದ್ದಾರೆ.

## ಸಾಹಿತ್ಯ ಸಿಂಚನ

ಕಲೆ
ಬಣ್ಣಗಳ ಮಾತು ಕೇಳಿದಾಗ
ಮನಸೇ ಚಿತ್ರವಾಗುತ್ತದೆ,
ಭಾವನೆಗಳ ತುಂತುರು ಬೀಳುವಾಗ
ಕಲೆ ಜೀವಂತವಾಗುತ್ತದೆ.

ಕಾಗದದ ಮೇಲೆ ರೇಖೆ ಬರೆದರೆ
ಕೇವಲ ಗೆರೆ ಅಲ್ಲ ಅದು,
ಹೃದಯದೊಳಗಿನ ಕನಸುಗಳು
ರೂಪ ಪಡೆದ ಕಥೆ ಅದು.

ನೃತ್ಯದ ಹೆಜ್ಜೆಯಲ್ಲಿ ನಾದವಿದೆ,
ಸಂಗೀತದಲ್ಲಿ ಆತ್ಮದ ಸ್ಪರ್ಶ,
ಕಲೆಯಿಲ್ಲದ ಜೀವನವೆಂದರೆ
ಬಣ್ಣವಿಲ್ಲದ ನಿಶ್ಶಬ್ದ ದರ್ಶನ.

ಕಲೆ ಎಂದರೆ ಆತ್ಮದ ಭಾಷೆ,
ಮಾತಿಲ್ಲದೆ ಹೇಳುವ ಕಥೆ,
ಮಾನವನ ಹೃದಯದೊಳಗಿರುವ
ಅಮರ ಸೌಂದರ್ಯದ ಪಥವೇ ಕಲೆ.

– ರಮೇಶ್

## ಡಾ. ಚಂದ್ರಶೇಖರ್ ಪಾಟೀಲರಿಗೆ ಸಚಿವ ಸ್ಥಾನ ನೀಡುವಂತೆ ಶರಣಪ್ಪ ಲಿಂಗಸಗೂರು ಒತ್ತಾಯ

ನೈಜ್ಯ ದೆಸೆ ನ್ಯೂಸ್



ಮಸ್ಕಿ : ಪದವೀಧರ ಕ್ಷೇತ್ರದಿಂದ ಚುನಾಯಿತರಾಗಿರುವ ಡಾ. ಚಂದ್ರಶೇಖರ್ ಪಾಟೀಲ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡುವಂತೆ ಶರಣಪ್ಪ ಲಿಂಗಸಗೂರು ಒತ್ತಾಯಿಸಿದ್ದಾರೆ ಅವರು ಭಾನುವಾರ ಪತ್ರಿಕಾ ಹೇಳಿಕೆ ನೀಡಿ ರಾಜ್ಯ ರಾಜಕಾರಣದಲ್ಲಿ ಪ್ರಭಾವಿ ನಾಯಕರಾಗಿರುವ ಹಾಗೂ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಅತ್ಯಂತ ಮುತುವರ್ಜಿ ವಹಿಸಿ ಪಕ್ಷವನ್ನು ಸಂಘಟನೆ ಮಾಡುತ್ತಿರುವ ಎಲ್‌ಸಿ ಚಂದ್ರಶೇಖರ್ ಪಾಟೀಲ್ ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿದರೆ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಯಾಗಲಿದೆ ಆದ್ದರಿಂದ ಈ ಭಾಗದ ಸಮಗ್ರ ಅಭಿವೃದ್ಧಿ ಹಿತದೃಷ್ಟಿಯಿಂದ ಚಂದ್ರಶೇಖರ್ ಪಾಟೀಲ್ ಅವರಿಗೆ ಸಚಿವ ಸ್ಥಾನ ಕಲ್ಪಿಸಿ ಕೊಡಬೇಕೆಂದು ಶರಣಪ್ಪ ಲಿಂಗಸುಗೂರು ಒತ್ತಾಯಿಸಿದ್ದಾರೆ

## ಜೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಮೂಕಪ್ರಾಣಿ ಬಲಿ: ಗೋರ್ಕಲ್ ಗ್ರಾಮಸ್ಥರ ಆಕ್ರೋಶ

ನೈಜ್ಯ ದೆಸೆ ನ್ಯೂಸ್





ಮಾನ್ವಿ: ತಾಲೂಕಿನ ಗೋರ್ಕಲ್ ಗ್ರಾಮದಲ್ಲಿ ಜೆಸ್ಕಾಂ ಇಲಾಖೆ ಅಳವಡಿಸಿದ ವಿದ್ಯುತ್ ಪರಿವರ್ತಕದ ವಿದ್ಯುತ್ ಸ್ಪರ್ಶಕ್ಕೆ ಗ್ರಾಮದ ರೈತರೊಬ್ಬರ ಹಸು ಒಂದು ಮೃತಪಟ್ಟ ಘಟನೆ ನಡೆದಿದೆ ಭಾನುವಾರ ಗ್ರಾಮದಲ್ಲಿ ರೈತ ದಾದುಸಾಬ್ ಎನ್ನುವವರ ಎತ್ತು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದು ಗ್ರಾಮಸ್ಥರು ಸಾಕಷ್ಟು ಬಾರಿ ವಿದ್ಯುತ್ ಪರಿವರ್ತಕಕ್ಕೆ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಇಲ್ಲವೇ ಜನವಸತಿ ಪ್ರದೇಶದಿಂದ ದೂರ ಅಳವಡಿಸಬೇಕು ಎಂದು ಮನವಿ ಸಲ್ಲಿಸಿದರು ಕೂಡ ಸ್ಪಂದಿಸದೆ ಇದ್ದುದರಿಂದ ಇಂದು ವಿದ್ಯುತ್ ಸ್ಪಷ್ಟಕ್ಕೆ ಹಸು ಒಂದು ಬಲಿಯಾಗಿದ್ದು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಹಾಗೂ ಮಕ್ಕಳು ಓಡಾಟ ಇರುವುದರಿಂದ ಅಪಾಯವಿದ್ದು ಕೂಡಲೇ ವಿದ್ಯುತ್ ಪ್ರವೇಶಕ್ಕೆ ಅಗತ್ಯ ಸುರಕ್ಷತ ಕ್ರಮ ಅಳವಡಿಸಬೇಕು ಇಲ್ಲವೇ ಬೇರೆಡೆ ಸ್ಥಳಾಂತರಿಸಬೇಕು,ತಕ್ಷಣವೇ ಮೃತಪಟ್ಟ ಹಸುವಿನ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸುತ್ತಿದ್ದಾರೆ

31– ಮಾನ್ವಿ –1:ಮಾನ್ವಿ: ತಾಲೂಕಿನ ಗೋರ್ಕಲ್ ಗ್ರಾಮದಲ್ಲಿ ಜೆಸ್ಕಾಂ ಇಲಾಖೆ ಅಳವಡಿಸಿದ ವಿದ್ಯುತ್ ಪರಿವರ್ತಕದ ವಿದ್ಯುತ್ ಸ್ಪರ್ಶಕ್ಕೆ ಗ್ರಾಮದ ರೈತರೊಬ್ಬರ ಹಸು ಮೃತಪಟ್ಟಿರುವುದು.

# ದಲಿತ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕ ಸಿಂಧನೂರಿಗೆ ನೂತನ ಪದಾಧಿಕಾರಿಗಳ ಆಯ್ಕೆ

ನೈಜ್ಯ ದೆಸೆ ನ್ಯೂಸ್



ಸಿಂಧನೂರು: ನಗರದ ಕರ್ನಾಟಕ ರಾಜ್ಯ ನೌಕರರ ಭವನದಲ್ಲಿ ಜಿಲ್ಲಾ ಅಧ್ಯಕ್ಷರಾದ ಡಾ. ಹುಸೇನಪ್ಪ ಅಮರಾಪುರ ಅವರ ಅಧ್ಯಕ್ಷತೆಯಲ್ಲಿ ನಡೆದ ದಲಿತ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ನೇಮಕಾತಿ ಸಭೆಯಲ್ಲಿ ತಾಲೂಕು ಘಟಕ ಸಿಂಧನೂರಿನ ವಿವಿಧ ಸ್ಥಾನಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಅನುಮೋದಿಸಲಾಯಿತು.ಸಭೆಯಲ್ಲಿ ಗೌರವ ಸಲಹೆಗಾರರಾಗಿ ಡಿ.ಎಚ್. ಕಂಬಳಿ, ಚಂದ್ರಶೇಖರ ಗೊರೆಬಾಳ, ಹುಸೇನಸಾಬ್, ಎಚ್.ಎನ್. ಬಡಿಗೇರ, ನಾರಾಯಣಪ್ಪ ಮಾಡಸಿರವಾರ ಹಾಗೂ ಮಂಜುನಾಥ ಗಾಂಧಿನಗರ ಅವರನ್ನು ನೇಮಕ ಮಾಡಲಾಯಿತು. ತಾಲೂಕು ಘಟಕದ ಅಧ್ಯಕ್ಷರಾಗಿ ಡಾ. ಅರುಣಕುಮಾರ ಬೇರ್ಗಿ, ಕಾರ್ಯಾಧ್ಯಕ್ಷರಾಗಿ ಡಾ. ಮಲ್ಲಿಕಾರ್ಜುನ ಕಮತಗಿ, ಉಪಾಧ್ಯಕ್ಷರಾಗಿ ಆಂಜನೇಯ ರಾಮತ್ನಾಳ ಹಾಗೂ ಡಾ. ಮದಗಪ್ಪ ಅವರನ್ನು ಆಯ್ಕೆ ಮಾಡಲಾಯಿತು.ಪ್ರಧಾನ ಕಾರ್ಯದರ್ಶಿಯಾಗಿ ರಾಮಣ್ಣ ಹಿರೇಬೇರ್ಗಿ, ಸಹ ಕಾರ್ಯದರ್ಶಿಗಳಾಗಿ ದುರುಗಪ್ಪ ಗುಡದೂರು ಹಾಗೂ ಎಚ್.ಕೆ. ದಿದ್ಗಿ, ಸಂಘಟನಾ ಕಾರ್ಯದರ್ಶಿಗಳಾಗಿ ಡಾ. ಶಂಕರ ಗುರಿಕಾರ, ನೂರಮಹ್ಮದ್ ಮತ್ತು ಜ್ಯೋತಿ ಅವರನ್ನು ನೇಮಿಸಲಾಯಿತು. ಖಜಾಂಚಿಯಾಗಿ ಶರಣಪ್ಪ ಅವರು ಆಯ್ಕೆಯಾದರು.ಸಾಹಿತ್ಯಿಕ ಸಲಹೆಗಾರರಾಗಿ ಡಾ. ಜಾಜಿ ದೇವೇಂದ್ರಪ್ಪ, ಡಾ. ಕೆ. ಖಾದರ ಹಾಗೂ ತುಳಸಿದಾಸ, ಪತ್ರಿಕಾ ಸಲಹೆಗಾರರಾಗಿ ದುರ್ಗೇಶ್ ಹಾಗೂ ಲಕ್ಷ್ಮಣ ಕುರುಕುಂದಿ, ಕಾನೂನು ಸಲಹೆಗಾರರಾಗಿ ಮಿಥುನ್ ಕುಮಾರ ಮತ್ತು ರಾಮಪ್ಪ ಬೊಮ್ಮನಾಳ, ಸಾಂಸ್ಕೃತಿಕ ಸಲಹೆಗಾರರಾಗಿ ಎಂ. ಗಂಗಾಧರ ಬುದ್ದಿನ್ನಿ, ಬಿ.ಎನ್. ಯರದಿಹಾಳ, ಎಚ್.ಆರ್. ಹೊಸಮನಿ ಹಾಗೂ ಬಸವರಾಜ ಬಾದರ್ಲಿ ಅವರನ್ನು ನೇಮಕ ಮಾಡಲಾಯಿತು.ನಿರ್ದೇಶಕರಾಗಿ ಶ್ರೀ ತಿರುಪತಿ, ರಾಮಣ್ಣ, ಕಾಳಿಂಗಪ್ಪ, ಮೌಲಾಲಿ ಗೊನ್ವಾರ, ಮೌನೇಶ ಜಾಲವಾಡಗಿ, ರಾಮಕೃಷ್ಣ ಬಂಡಾರಿ, ಕೃಷ್ಣಮೂರ್ತಿ ದುಮತಿ, ಬಸವರಾಜ ದೇವಿಪುರ ಹಾಗೂ ರವಿ ಮಲ್ಲಾಪುರ ಅವರು ಆಯ್ಕೆಯಾದರು.ಸಭೆಯಲ್ಲಿ ಸಂಘಟನೆಯ ವಾರ್ಷಿಕ ಚಟುವಟಿಕೆಗಳು, ಸಾಹಿತ್ಯಿಕ ಕಾರ್ಯಕ್ರಮಗಳು, ಸಾಮಾಜಿಕ ಜಾಗೃತಿ ಅಭಿಯಾನಗಳು ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಅಭಿನಂದನಾ ಸಮಾರಂಭದ ಕುರಿತು ವಿಸ್ತೃತವಾಗಿ ಚರ್ಚಿಸಿ ಅನುಮೋದಿಸಲಾಯಿತು. ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಎಲ್ಲಾ ಪದಾಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸುವ ಸಂಕಲ್ಪ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷ ತಿಮ್ಮಣ್ಣ, ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ತೋರಗಲ್, ಬಸವರಾಜ ಹಳ್ಳಿ, ಡಾ. ಶರೀಫ್ ಹಸಂಕಲ್, ಸುಭಾಷ್ ಹಾರ್ವಪುರ ಸೇರಿದಂತೆ ಹಲವು ಪ್ರಗತಿಪರ ಹೋರಾಟಗಾರರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ವೆಂಕಟೇಶ ಬುಕನಟ್ಟಿ ವಂದಿಸಿದರು.ನೂತನ ಪದಾಧಿಕಾರಿಗಳ ಆಯ್ಕೆಯಿಂದ ತಾಲೂಕಿನಲ್ಲಿ ದಲಿತ ಸಾಹಿತ್ಯ, ಸಂಸ್ಕೃತಿ ಹಾಗೂ ಸಾಮಾಜಿಕ ಜಾಗೃತಿಗೆ ಹೊಸ ಚೈತನ್ಯ ದೊರೆಯಲಿದ್ದು, ಸಂಘಟನೆಯು ಮತ್ತಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸ ವ್ಯಕ್ತವಾಯಿತು.



## ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿ,ಗ್ರಾಮಸ್ಥರ ಪ್ರೀತಿಗೆಪಾತ್ರರಾದ ಅಮರೇಗೌಡ ಮಾ.ಪಾ ವಯೊನಿವೃತ್ತಿ

ನೈಜ್ಯ ದೆಸೆ ನ್ಯೂಸ್



ಮಸ್ಕಿ: ತಾಲ್ಲೂಕಿನ ಹೂವಿನಬಾವಿಯ ಅಮರೇಗೌಡ ಮಾ ಪಾ ಸ್ವಗ್ರಾಮದಲ್ಲಿ ಶಿಕ್ಷಕ ವೃತ್ತಿಗೆ ಸೇರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಧೀರ್ಘ 27 ವರ್ಷ ನಾಲ್ಕು ತಿಂಗಳು ಸೇವೆ ಸಲ್ಲಿಸಿ ನಂತರ ಮಸ್ಕಿ ದನಗರವಾಡಿ ಪಿಎಮ್ ಶ್ರೀ ಸರಕಾರಿ ಪ್ರಾಥಮಿಕ ಶಾಲೆಗೆ ವರ್ಗವಾಗಿ ಮುಖ್ಯಗುರು ಬಡ್ತಿ ಪಡೆದು ಹದಿನೈದು ದಿನಗಳಲ್ಲಿ ಸೇವಾ ನಿವೃತ್ತಿ ಹೊಂದಿರುವ ಇವರು, ಹೂವಿನಬಾವಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ತೀವ್ರ ಕುಸಿಯುತ್ತಿರುವ ಸಂದರ್ಭದಲ್ಲಿ,ಶಿಕ್ಷಕರ, ಗ್ರಾಮಸ್ಥರ ಸಹಕಾರದಿಂದ ವಿದ್ಯಾರ್ಥಿಗಳು ಬೇರೆ ಬೇರೆ ಶಾಲೆಗೆ ಹೊದವರನ್ನು ಮತ್ತೆ ತಮ್ಮ ಶಾಲೆಗೆ ಬರುವಂತೆ ಮಾಡಿದ ಶ್ರೇಯಸ್ಸು ಇವರದು,ನಂತರ ಯಾವ ಖಾಸಗಿ ಶಾಲೆಗೆ ಕಡಿಮೆ ಇಲ್ಲವಂತೆ ತೊರಿಸಿ,ಇಡಿ ಶಾಲೆಯ ಗೋಡೆಯ ಮೇಲೆ ಪ್ರಾಣಿ ಪಕ್ಷಿಗಳ ಚಿತ್ರ,ಇಂಗ್ಲಿಷ್, ಹಿಂದಿ ಶಬ್ದಗಳ ಬರವಣಿಗೆ, ಸಂಜೆ ಆರು ಗಂಟೆ ತನಕ ಮಕ್ಕಳಿಗೆ ವಿಶೇಷ ಬೋಧನೆ, ಸ್ಮಾರ್ಟ್ ಕ್ಲಾಸ್ ಬಳಕೆ ಅಷ್ಟೇ ಅಲ್ಲ ಸ್ವಂತ ಒಂದು ಲಕ್ಷ ರೂಪಾಯಿ ಮೊತ್ತದ ಬಾಂಡ ನ್ನು ಖಾಸಗಿ ಬ್ಯಾಂಕಿನಲ್ಲಿ ಠೇವಣಿ ಇಟ್ಟು,ಅದರಿಂದ ಬರುವ ವಾರ್ಷಿಕ ಹನ್ನೆರಡು ಸಾವಿರ ರೂಪಾಯಿ ಬಡ್ಡಿ ಹಣ ಬಡ ಮಕ್ಕಳಿಗೆ ಉಪಯುಕ್ತ. ಹೀಗೆ ಇವರು ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗುತ್ತಾರೆ. ಇವರ ಸೇವೆ ಮೆಚ್ಚಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರು. ಹಾಗೂ ವಿವಿದಡೆ ಪ್ರಶಸ್ತಿ ಸನ್ಮಾನ,ಗೌರವ ಹುಡುಕಿಕೊಂಡು ಬಂದವು. ಹದಿನೈದು ದಿನಗಳ ಹಿಂದೆ ಮುಖ್ಯಗುರುಗಳಾಗಿ ಬಡ್ತಿ ಪಡೆದು ಹುವಿನಬಾವಿ ಶಾಲೆಯಿಂದ ವರ್ಗಾವಾಗಿ ಮಸ್ಕಿಯ ದನಗರವಾಡಿ ಶಾಲೆಯಲ್ಲಿ ಎಲ್ಲಾ ಶಿಕ್ಷಕರ ಜೊತೆ ಉತ್ತಮ ಬಾಂದವ್ಯ ಹೊಂದಿದ್ದರು, ಹೀಗಾಗಿ ವಯೋನಿವೃತ್ತಿ ಸಮಾರಂಭ ನಡೆಯಿತು, ಹಿರಿಯ ಶಿಕ್ಷಕರು, ,ಶಾಲಾ ಭೂಧಾನಿಗಳು,ಶಿಕ್ಷಕ ವೃಂದ ಭಾಗವಹಿಸಿ, ನೆರೆದ ಅತಿಥಿ ಗಳು ಅಮರೇಗೌಡ ಮಾ ಪಾ ಅವರ ಬಗ್ಗೆ ಗುಣಗಾನದ ಮಾತುಗಳನ್ನಾಡಿದರು.ಹಾಗೆ ಅಮರೇಗೌಡ ಮಾ ಪಾ ಸರ್ ಭೂಧಾನಿಗಳಾದ ಅರ್ಜುನಸಿಂಗ ಮಾ ಪಾ ಇವರಿಂದ ಶಾಲೆಗೆ ಒಂದುವರೆ ಎಕರೆ ಭೂಮಿಯನ್ನು ಪಡೆಯವಲ್ಲಿ ಯಶಸ್ವಿಯಾದರು ಇದು ಶಾಲಾ ಕಳಕಳಿ,ಕಾಳಜಿ,ತಮ್ಮ ಸ್ವಂತ ಹದಿನೆಂಟು ಸಾವಿರ ಹಣದಿಂದ ಅಲೆಮಾರಿ ಕಾಬಾಡು ವ್ಯವಸ್ಥೆ ಮಾಡಿಸಿದ್ದಾರೆ,ನಿಜವಾಗಿ ಅಮರೇಗೌಡ ಮಾ ಪಾ ಮುಖ್ಯ ಗುರುಗಳು ಸುಧೀರ್ಘ ಇಪ್ಪತ್ತೇಳು ವರ್ಷ ನಾಲ್ಕು ತಿಂಗಳ ಶಿಕ್ಷಕ ಸೇವೆಯನ್ನು ನಿಸ್ವಾರ್ಥ ಸೇವೆ ಮಾಡಿದ ಕೀರ್ತಿಗೆ ಆದರ್ಶ ಪ್ರಾರ್ಯರು,ಭಗವಂತ ಇವರ ವಯೊ ನಿವೃತ್ತಿ ಆರೋಗ್ಯ,ಸುಖಕರದಿಂದ ಕೂಡಿರಲಿ,ಮತ್ತಷ್ಟು ಶಿಕ್ಷಣ ಕ್ಷೇತ್ರಕ್ಕೆ ಸೇವೆಗೈಯಲಿ ಎಂಬುದು ಅಪಾರ ವಿದ್ಯಾರ್ಥಿಗಳ,ಜನರ ಆಶಯವಾಗಿದೆ.

# "ಸಲಾವುದ್ದಿನ್ ಮನೆಯೇ ಪಕ್ಷಿಧಾಮ ಅಶಕ್ತ ಪಕ್ಷಿಗೆ ಕೈತುತ್ತಿನ ಪ್ರೀತಿ

ನೈಜ್ಯ ದೆಸೆ ನ್ಯೂಸ್



ಮಾನ್ವಿ –: ರಾತ್ರಿ ಮನೆ ಬಾಗಿಲು, ಕಿಟಕಿಗಳನ್ನು ಮುಚ್ಚಿಕೊಂಡು ಮಲಗಿದ್ದ ಸಲಾವುದ್ದೀನ್ ಅವರಿಗೆ ಸಣ್ಣದೊಂದು ಶಬ್ದ ಕೇಳಿಸಿತು. ಎದ್ದು ನೋಡಿದಾಗ ಕಿಟಕಿಯ ಗಾಜಿಗೆ ಚಿಕ್ಕ ಗುಬ್ಬಿಗಳು ಕುಟುಕುತ್ತಿದ್ದವು. ಮನೆಯೊಳಗೆ ಗೂಡು ಕಟ್ಟಿದ್ದ ಅವುಗಳು ಒಳಗೆ ಬರಲಾಗದೆ ಹೊರಗೇ ಉಳಿದಿದ್ದವು. ಆ ಕ್ಷಣದಲ್ಲಿ ಸಲಾವುದ್ದೀನ್ ಅವರ ಮನಸ್ಸು ಕರಗಿತು. 'ಈ ಚಿಕ್ಕ ಜೀವಿಗಳಿಗೆ ಆಶ್ರಯ ಕೊಡದೇ ನಾವು ಮನುಷ್ಯತ್ವದ ಬಗ್ಗೆ ಹೇಗೆ ಮಾತನಾಡಬಹುದು?' ಎಂಬ ಪ್ರಶ್ನೆ ಅವರನ್ನು ಕಾಡಿತು. ಆ ಒಂದು ಘಟನೆ ಅವರ ಬದುಕಿನ ದಿಕ್ಕನ್ನೇ ಬದಲಿಸಿತು.ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಗುತ್ತಿಗೆದಾರ ಸಲಾವುದ್ದೀನ್ ಕಳೆದ ಹತ್ತು ವರ್ಷಗಳಿಂದ ಪಕ್ಷಿಗಳ ಆರೈಕೆಯನ್ನು ಬದುಕಿನ ಭಾಗವನ್ನಾಗಿ ಮಾಡಿಕೊಂಡಿದ್ದಾರೆ. ಜನರ ಪಾಲಿಗೆ ಅವರು ಈಗ 'ಪಕ್ಷಿಪ್ರೇಮಿ ಸಲಾವುದ್ದೀನ್' ಎಂದೇ ಪರಿಚಿತರು. ಅವರ ಮನೆಯಂಗಳಕ್ಕೆ ಕಾಲಿಟ್ಟರೆ ಅದು ಸಾಮಾನ್ಯ ಮನೆ ಎನ್ನಿಸುವುದಿಲ್ಲ. ಪೈಪು, ಗಡಿಗೆಗಳಿಂದ ಮಾಡಿರುವ ಕೃತಕ ಗೂಡುಗಳು, ನೀರಿನ ಪಾತ್ರೆಗಳು, ಕಾಳು–ಕಡಿಯ ಪಾತ್ರೆಗಳು ಎಲ್ಲೆಲ್ಲೂ ಕಾಣುತ್ತವೆ. ಗುಬ್ಬಿ, ಮೈನಾ, ಬೆಳ್ಳಕ್ಕಿ, ಕಾಗೆ ಸೇರಿದಂತೆ ಹಲವು ಪಕ್ಷಿಗಳು ಅಲ್ಲಿ ಸ್ವಚ್ಛಂದವಾಗಿ ಹಾರುತ್ತಿರುತ್ತವೆ. ಪಕ್ಷಿಗಳ ಚಿಲಿಪಿಲಿ ಧ್ವನಿಯಿಂದ ಮನೆಯಂಗಳ ಸದಾ ಕಳೆಗಟ್ಟಿರುತ್ತದೆ. ಬೆಳಗಿನ ಜಾವ ಪಕ್ಷಿಗಳ ಕಲರವದೊಂದಿಗೇ ಮನೆಯವರ ದಿನ ಆರಂಭವಾಗುತ್ತದೆ. ಕೆಲವೊಮ್ಮೆ ಪಕ್ಷಿಗಳು ಮನೆಯೊಳಗೇ ಬಂದು ಕಿಟಕಿಯ ಮೇಲೆ, ಬಾಗಿಲಿನ ಅಂಚಿನಲ್ಲಿ ಕುಳಿತುಕೊಳ್ಳುತ್ತವೆ. ಮನೆಯವರು ಅವುಗಳನ್ನು ಓಡಿಸುವುದಿಲ್ಲ. ಬದಲಿಗೆ ಮನೆಯ ಸದಸ್ಯರಂತೆ ಮಾತನಾಡಿಸುತ್ತಾರೆ. ಹೀಗೆ ಮನುಷ್ಯರು ಮತ್ತು ಪಕ್ಷಿಗಳ ನಡುವೆ ಒಂದು ಅಪರೂಪದ ಬಾಂಧವ್ಯ ಅಲ್ಲಿ ಬೆಳೆದಿದೆ. ಸಲಾವುದ್ದೀನ್ ಅವರಿಗೆ ಪಕ್ಷಿಗಳು ಕೇವಲ ಜೀವಿಗಳಲ್ಲ; ಮನೆಯ ಸದಸ್ಯರೇ ಆಗಿವೆ. ಪ್ರತಿದಿನ ಬೆಳಗ್ಗೆ ಎದ್ದ ಕೂಡಲೇ ಅವುಗಳಿಗೆ ನೀರು ಇಡುವುದು, ಕಾಳು ಹಾಕುವುದು ಅವರ ಮೊದಲ ಕೆಲಸ. ಯಾವ ಪಾತ್ರೆಯಲ್ಲಿ ನೀರು ಕಡಿಮೆಯಾಗಿದೆ, ಯಾವ ಗೂಡಿನಲ್ಲಿ ಹೊಸ ಪಕ್ಷಿ ಬಂದಿದೆ ಎಂಬುದನ್ನೂ ಅವರು ಗಮನಿಸುತ್ತಾರೆ. ಬೇಸಿಗೆಯ ಬಿಸಿಲಿನಲ್ಲಿ ನೀರಿಗಾಗಿ ಹಾತೊರೆಯುವ ಹಕ್ಕಿಗಳನ್ನು ನೋಡಿದಾಗ ಅವರಿಗೆ ನೋವಾಗುತ್ತದೆ. 'ಮನುಷ್ಯರಿಗೆ ದಾಹವಾದರೆ ಕೇಳಿಕೊಂಡು ನೀರು ಕುಡಿಯಬಹುದು. ಆದರೆ ಈ ಮೂಕ ಜೀವಿಗಳು ಯಾರನ್ನು ಕೇಳಬೇಕು?' ಎಂದು ಅವರು ಪ್ರಶ್ನಿಸುತ್ತಾರೆ.ಸಲಾವುದ್ದೀನ್ ಅವರ ಈ ಕಾರ್ಯಕ್ಕೆ ಕುಟುಂಬದ ಬೆಂಬಲವೂ ದೊಡ್ಡ ಶಕ್ತಿ. ಪತ್ನಿ, ಮಕ್ಕಳು ಪಕ್ಷಿಗಳಿಗೆ ಆಹಾರ ಹಾಕುವುದರಿಂದ ಹಿಡಿದು ಗಾಯಗೊಂಡ ಪಕ್ಷಿಗಳ ಆರೈಕೆವರೆಗೂ ಎಲ್ಲ ಕೆಲಸಗಳಲ್ಲಿ ಕೈಜೋಡಿಸುತ್ತಾರೆ. ಮನೆಯವರು ಹೊರಗಡೆ ಹೋಗುವ ಸಂದರ್ಭದಲ್ಲೂ ಮೊದಲು ಪಕ್ಷಿಗಳಿಗೆ ನೀರು–ಆಹಾರದ ವ್ಯವಸ್ಥೆ ಮಾಡಿಕೊಂಡೇ ಹೋಗುತ್ತಾರೆ. 'ಕುಟುಂಬದ ಸಹಕಾರ ಇರದಿದ್ದರೆ ಇಷ್ಟೆಲ್ಲ ಮಾಡಲು ಸಾಧ್ಯವಾಗುತ್ತಿರಲಿಲ್ಲ' ಎಂದು ಅವರು ಹೇಳುತ್ತಾರೆ. ಅವರ ಸ್ನೇಹಿತ ಜಗನ್ನಾಥ ಚೌದರಿ ಸಹ ಸದಾ ಜೊತೆಗಿದ್ದು ನೆರವಾಗುತ್ತಿದ್ದಾರೆ.ಸಲಾವುದ್ದೀನ್ ಅವರ ಮನೆ ಈಗ ಪಕ್ಷಿಪ್ರೇಮಿಗಳ ಆಕರ್ಷಣೆಯ ಕೇಂದ್ರವಾಗಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಪರಿಸರಾಸಕ್ತರು ತಂಡಗಳಾಗಿ ಬಂದು ಅವರ ಕಾರ್ಯವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಪಕ್ಷಿಗಳಿಗೆ ಅವರು ಮಾಡಿರುವ ಗೂಡುಗಳು, ನೀರಿನ ವ್ಯವಸ್ಥೆ, ಆರೈಕೆಯ ವಿಧಾನಗಳನ್ನು ನೋಡಿ ಹಲವರು ತಮ್ಮ ಮನೆಯಲ್ಲೂ ಇದೇ ರೀತಿಯ ಪ್ರಯತ್ನ ಆರಂಭಿಸಿದ್ದಾರೆ.ಸ್ವತಃ ಸಲಾವುದ್ದೀನ್ ವಿವಿಧ ಕಾರ್ಯಕ್ರಮಗಳಿಗೆ ತೆರಳಿ ಪಕ್ಷಿ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಬೇಸಿಗೆಯಲ್ಲಿ ಮನೆಯಂಗಳದಲ್ಲಿ ಒಂದು ಪಾತ್ರೆ ನೀರು ಇಟ್ಟರೂ ಸಾಕು, ಅದು ಒಂದು ಪಕ್ಷಿಯ ಜೀವ ಉಳಿಸಬಹುದು ಎಂಬ ಸಂದೇಶವನ್ನು ಅವರು ಜನರಿಗೆ ನೀಡುತ್ತಿದ್ದಾರೆ. ಪಕ್ಷಿಗಳಿಗೆ ನೀರುಣಿಸಲು ಬಳಸುವ ವಿಶೇಷ ಬಾಟಲಿಗಳನ್ನು ಉಚಿತವಾಗಿ ಹಂಚಿ, ಕಡಿಮೆ ವೆಚ್ಚದಲ್ಲಿ ಅವುಗಳನ್ನು ಹೇಗೆ ಅರಿಸಬೇಕು ಎಂಬುದನ್ನೂ ಕಲಿಸುತ್ತಿದ್ದಾರೆ."ಪಕ್ಷಿಗಳಿಗೆ ದೊಡ್ಡ ಸಹಾಯ ಮಾಡಬೇಕೆಂದಿಲ್ಲ. ಒಂದು ಚಿಕ್ಕ ಪಾತ್ರೆಯಲ್ಲಿ ನೀರು ಇಟ್ಟರೂ ಸಾಕು' ಎಂಬುದು ಅವರ ಸರಳ ಮನವಿಯಾಗಿದೆ. ಒಮ್ಮೆ ಮನೆಯಂಗಳದಲ್ಲೇ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಗುಬ್ಬಿಗಳು ಇಂದು ಅಪರೂಪವಾಗುತ್ತಿವೆ. ಮರಗಳ ನಾಶ, ವಾಯುಮಾಲಿನ್ಯ, ಮೊಬೈಲ್ ವಿಕಿರಣ, ರಾಸಾಯನಿಕ ಬಳಕೆ–ಇವೆಲ್ಲವೂ ಪಕ್ಷಿಗಳ ಬದುಕಿಗೆ ದೊಡ್ಡ ಅಪಾಯವಾಗಿವೆ.ಈ ನಡುವೆ ಸಲಾವುದ್ದೀನ್ ಅವರಂತಹವರು ಕೇವಲ ಪಕ್ಷಿಗಳನ್ನು ಉಳಿಸುತ್ತಿಲ್ಲ; ಮಾನವೀಯತೆಯನ್ನೂ ಜೀವಂತವಾಗಿರಿಸುತ್ತಿದ್ದಾರೆ. ಒಂದು ಪಾತ್ರೆ ನೀರು, ಒಂದು ಮುಷ್ಟಿ ಕಾಳು ಮತ್ತು ಸ್ವಲ್ಪ ಮಮತೆ ಇದ್ದರೆ ಸಾಕು, ಮೂಕ ಜೀವಿಗಳ ಬದುಕಿನಲ್ಲಿ ಆಶೆಯಾಗಬಹುದು ಎಂಬುದನ್ನು ಅವರು ತಮ್ಮ ಬದುಕಿನ ಮೂಲಕ ಸಾಬೀತುಪಡಿಸಿದ್ದಾರೆ.

## ನ್ಯಾಯಾಲಯದಲ್ಲಿ ಪ್ರಕಾರಣ ದಾಖಲು ಹಿನ್ನಲೆ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ ಪುರಸಭೆಯಿಂದ ತಡೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಪಟ್ಟಣದ ರಾಘವೇಂದ್ರ ಸ್ವಾಮಿ ಮಠದ ಪಕ್ಕದಲ್ಲಿರುವ ಪುರಸಭೆ ಆಸ್ತಿ ಸಂಖ್ಯೆ 2–11–154ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹಿನ್ನೆಲೆಯಲ್ಲಿ ದಾಖಲಾಗಿರುವ ಅಂತಿಮ ತೀರ್ಪು ಪ್ರಕಟವಾಗುವವರೆಗೆ ಯಾವುದೇ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳದಂತೆ ಲಿಂಗಸಗೂರು ಪುರಸಭೆ ಮುಖ್ಯಾಧಿಕಾರಿ ಸೂಚನಾ ಪತ್ರ ಜಾರಿಗೊಳಿಸಿದ್ದಾರೆ.ಆಸ್ತಿ ಮಾಲೀಕರಾದ ವನಜಾಬಾಯಿ ಗಂಡ ರಾಘವೇಂದ್ರಾಚಾರ್ ಅವರ ಹೆಸರಿನಲ್ಲಿರುವ ಈ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ ಪುರಸಭೆಯಿಂದ ಪರವಾನಗಿ ನೀಡಲಾಗಿತ್ತು.ಆದರೆ, ಈ ಆಸ್ತಿಗೆ ಸಂಬಂಧಿಸಿದಂತೆ ಮುತಾಲಿಕ ರಾಘವೇಂದ್ರ ರಾವ್ ಅವರು ಲಿಂಗಸಗೂರಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ದಾಖಲಿಸಿದ್ದು, ಪ್ರಕರಣದಲ್ಲಿ ಪುರಸಭೆ ಮುಖ್ಯಾಧಿಕಾರಿ ಯವರನ್ನೂ ಪ್ರತಿವಾದಿಯಾಗಿ ಸೇರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪುರಸಭೆ ವತಿ ಯಿಂದ ದಿನಾಂಕ 29–05–2026ರಂದು ಸೂಚನಾ ಪತ್ರ ಹೊರಡಿಸಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಸದರಿ ಆಸ್ತಿಯಲ್ಲಿ ಯಾವುದೇ ರೀತಿಯ ಭೌತಿಕ ಕಟ್ಟಡ ನಿರ್ಮಾಣ ಅಥವಾ ಅದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಬಾರದು ಎಂದು ಎಚ್ಚರಿಕೆ ನೀಡಲಾಗಿದೆ.ಸೂಚನೆಯನ್ನು ಉಲ್ಲಂಘಿಸಿ ಕಾಮಗಾರಿ ನಡೆಸಿದಲ್ಲಿ ಈಗಾಗಲೇ ನೀಡಿರುವ ಕಟ್ಟಡ ನಿರ್ಮಾಣ ಪರವಾನ ಗಿಯನ್ನು ನಿಯಮಾನುಸಾರ ರದ್ದುಪಡಿಸುವುದರ ಜೊತೆಗೆ ಕಾಮಗಾರಿಗಾಗಿ ಸ್ಥಳದಲ್ಲಿ ಸಂಗ್ರಹಿಸಿರುವ ನಿರ್ಮಾಣ ಸಾಮಗ್ರಿ ಗಳನ್ನು ವಶಪಡಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ನ್ಯಾಯಾಲಯದ ತೀರ್ಪು ಹೊರಬೀಳುವವರೆಗೆ ವಿವಾದಿತ ಆಸ್ತಿಯ ಸ್ಥಿತಿಗತಿಯನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

## ನೇಮಕಾತಿ ಪ್ರಕಟಣೆ

KEA ನೇಮಕಾತಿ 2026: 6 ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮೇ 2026 ರ ಏಇಂ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 03–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಅಧಿಕೃತ ವೆಬ್‌ಸೈಟ್: cetonline.karnataka.gov.in

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ತಂಬಾಕು ವಿರೋಧ ದಿನಾಚರಣೆ ಕಾರ್ಯಕ್ರಮ ಜರುಗಿತು

**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ : ತಾಲೂಕಿನ ಮುದ್ದಾಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ನಿಮಿತ್ತ ಒಕ್ಕೂಟ ಸಭೆಯಲ್ಲಿ ಸ್ವ–ಸಹಾಯ ಸಂಘಗಳ ಸದಸ್ಯರಿಗೆ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ,ಮಕ್ಕಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ತಾಲೂಕಿನ ಯೋಜನಾಧಿಕಾರಿಗಳಾದ ರಾಘವೇಂದ್ರ ಕಾರ್ಯಕ್ರಮದ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಯೋಜನೆಯಿಂದ ನಡೆಸುತ್ತಿರುವ ಕಾರ್ಯಕ್ರಮ ಇದಾಗಿದ್ದು ತಂಬಾಕು ವಿರೋಧ ದಿನಾಚರಣೆ, ಮಾದಕ ವಸ್ತು ವಿರೋಧಿ ದಿನಾಚರಣೆ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ, ಮದ್ಯವರ್ಜನ ಶಿಬಿರ, ಈ ರೀತಿಯ ಹಲವು ಮಾಹಿತಿ ಶಿಬಿರಗಳ ಮೂಲಕ



ಸಾರ್ವಜನಿಕರಿಗೆ, ಶಾಲಾ ಕಾಲೇಜುಗಳಲ್ಲಿ, ಪ್ರತಿ ವರ್ಷ ಯೋಜನೆಯಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ತಾಲೂಕು ಪಂಚಾಯತ್ ಸದಸ್ಯ ಬಿ. ಎಸ್. ಶಿವಮೂರ್ತಿ, ಮತ್ತು ಮುದ್ದಾಪುರ ಗ್ರಾಮದ ವಿಜಯ ಕರನಾಡು ಕರ್ನಾಟಕ ರಕ್ಷಣಾ ವೇದಿಕೆ ಕಂಪ್ಲಿ ತಾಲೂಕಿನ ಗೌರವಾಧ್ಯಕ್ಷ ಬಿ. ಗೋಪಾಲ ಯಾದವ್ ಭಾಗವಹಿಸಿ ಯೋಜನೆಯಿಂದ ರಾಜ್ಯಾದ್ಯಂತ ಪರಮ ಪೂಜ್ಯರು ಉತ್ತಮ ಸಮಾಜ ನಿರ್ಮಾಣಕ್ಕೆ ಹಾಗೂ ಸಮಾಜಮುಖಿ, ಸೇವಾ ಕಾರ್ಯಕ್ರಮಗಳನ್ನು ಅತ್ಯಂತ ಉತ್ತಮವಾಗಿ ನಡೆಸುತ್ತಿರುವುದು ಬಹಳ ಸಂತೋಷವಾಗುತ್ತಿದೆ ಎಂದು ತಿಳಿಸಿ ಯೋಜನೆಯ ಎಲ್ಲಾ ಸೇವಾಕಾರ್ಯಗಳಿಗೆ ಮುಂದಿನ ದಿನಗಳಲ್ಲಿ ನಮ್ಮ ಸಹಕಾರ ಸಂಪೂರ್ಣವಾಗಿ ನೀಡುವುದಾಗಿ ಹೇಳಿದರು. ಸಂಪನ್ಮೂಲ ವ್ಯಕ್ತಿ ಜಿಲಾನ್ ಸಾಬ್ ಬಡಿಗೇರ್ ಮಾತನಾಡಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕು–ರಿತು ಸದಸ್ಯರಿಗೆ ತಂಬಾಕು ಸೇವನೆಯಿಂದಾಗಿ ಆಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಇಂತಹ ಹವ್ಯಾಸಗಳಿಂದ ಸಮಾಜ ಹಾಳಾಗುತ್ತಿರುವ ಬಗ್ಗೆ ಪ್ರತಿ ದಿನ ಸಮಾಜದಲ್ಲಿ ನಡೆವುತ್ತಿರುವ ದುರ್ಘಟನೆಗಳ ಬಗ್ಗೆ ಸಣ್ಣ ಸಣ್ಣ ಉದಾರಣೆ ನೀಡುವ ಮೂಲಕ ಉತ್ತಮ ಮಾಹಿತಿ ನೀಡಿದರು. ಒಲಂಪಿಯಾಡ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಸಂದರ್ಭದಲ್ಲಿ ಮುದ್ದಾಪುರ ಗ್ರಾಮದಲ್ಲಿ ಕಳೆದ ಮೂರುವರೆ ವರ್ಷಗಳ ಕಾಲ ಸೇವಾ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಿದ ಸೇವಾಪ್ರತಿನಿಧಿ ಚೈತ್ರಾ ಅವರಿಗೆ ಒಕ್ಕೂಟದವ–ರಿಂದ ಸನ್ಮಾನಿಸಿ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಧರ್ಮಸ್ಥಳ ಸಂಸ್ಥೆ ತಾಲೂಕಿನ ಕೃಷಿ ಅಧಿಕಾರಿಗಳಾದ ಸಂಜುಕುಮಾರ್, ಒಕ್ಕೂಟದ ಅಧ್ಯಕ್ಷರಾದ ಸಾವಿತ್ರಮ್ಮ, ಉಪಾಧ್ಯಕ್ಷರಾದ ಲಕ್ಷ್ಮಿ, ಹಾಗೂ ಪದಾಧಿಕಾರಿಗಳು, ಮೇಲ್ವಿಚಾರಕರಾದ ಸೋಮಶೇಖರ್, ಸೇವಾಪ್ರತಿನಿಧಿ ಗಂಗಮ್ಮ, ಹಾಗೂ ಕುಮಾರಿ ಕವಿತಾ ಸೇರಿದಂತೆ ಸ್ವ ಸಹಾಯ ಸಂಘಗಳ ಸದಸ್ಯರು ಹಾಜರಿದ್ದರು.

## ತೊರಣದಿನ್ನಿ; ದೇಶಭಕ್ತ ದೇವರಾಜ ನಾಯಕ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ

**ನೈಜ್ಯ ದೆಸೆ ನ್ಯೂಸ್**




ಮಸ್ಕಿ: ತಾಲ್ಲೂಕಿನ ತೋರಣದಿನ್ನಿ ಗ್ರಾಮದಲ್ಲಿ ದೇಶಭಕ್ತ ದೇವರಾಜ್ ನಾಯಕ್ ಸುಂಕನೂರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸ್ವಾಮಿ ವಿವೇಕಾನಂದ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿ–ತ್ತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೈಯಾದ್ರಿ ವಿವಿದ್ದೋಷ ಸಂಘದ ಅಧ್ಯಕ್ಷರಾದ ಕೇಶವ ಜೀ ಪಾಲ್ಗೊಂಡು ದೇವರಾಜ್ ನಾಯಕ್ ನಮ್ಮೊಡನೆ ಇಲ್ಲ ಸಮಾಜಕ್ಕೆ ಒಂದು ಮಾಡಿದ ಕಾರ್ಯ ಕೊಡುಗೆ ಅದ್ಭುತವಾಗಿದೆ ದೇವರಾಜ್ ನಾಯಕನ ಸ್ಮರಣಾಥ–ರ್ಕವಾಗಿ ಇಂಥ ಪುಣ್ಯದ ಕಾರ್ಯಕ್ರಮವನ್ನು ಹಮ್ಮಿಕೊಂಡ ತೋರಣದಿನ್ನಿ ಗೆಳೆಯರ ಬಳಗದ ಕಾರ್ಯ ಶ್ಲಾಘನೀಯ ಎಂದು ಹೇಳಿದರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳು ಮಾತನಾಡಿದ ವಿಶ್ವನಾಥ್ ಪಟೇಲ್ ತೋರಣದಿನ್ನಿ ಅವರು ಯುವಕರು ದೇಶ ಕಟ್ಟುವ ಕೆಲಸವನ್ನು ಮಾಡಬೇಕು ದುಶ್ಚಟಗಳ ದಾಸರಾಗಬೇಡಿ, ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸಿ ಎಂದು ಹೇಳಿದರು ಇದೇ ಸಂದರ್ಭದಲ್ಲಿ ವೈಯೋ ನಿ ವೃತ್ತಿ ಹೊಂದಿದ ಸರಕಾರಿ ಪ್ರೌಢಶಾಲೆ ತೋರಣದಿನ್ನಿ ಮುಖ್ಯ ಗುರುಗಳಾದ ಮಲ್ಲಪ್ಪ ಅವರಿಗೆ ತೋರಣದಿನ್ನಿಯ ಗೆಳೆಯರ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸೋಮಶೇಖರ ಜೀ,ಪಿಎಸೈ ಗುರುಚಂದ್ರ ಯಾದವ ಹಾಗೂ ಮುಂತಾದ ಗಣ್ಯರು,ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಧಿಕ ಮಾಸದ ಅಂಗವಾಗಿ ವಿಶೇಷ ಪೂಜೆ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

ಮಸ್ಕಿ : ತಾಲೂಕ ಜಂಗಮ ಸಮಾಜ ಹಾಗೂ ನಗರ ಘಟಕದ ಜಂಗಮ ಸಮಾಜದ ವತಿಯಿಂದ ಅಧಿಕ ಜೇಷ್ಠ ಮಾಸದ ಅಂಗವಾಗಿ ರವಿವಾರ ಪಟ್ಟಣದ ಗಚ್ಚಿನ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ವಿಶೇಷ ಪೂಜಾ ಕಾರ್ಯಕ್ರಮ ಹಾಗೂ ಮಸ್ಕಿ ತಾಲೂಕ ಜಂಗಮ ಸಮಾಜದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸ ಕಾರ್ಯಕ್ರಮ ಅರ್ಥಪೂರ್ಣ ವಾಗಿ ಜರುಗಿ–ತು.ಈ ವೇಳೆ,ಕುದುರೆಮೋತಿ, ಶಾಖಾಮಠ ಶ್ರೀ. ಮ.ನಿ.ಪ್ರ ಜ. ವಿಜಯ ಮಹಾಂತ ಮಹಾಸ್ವಾಮಿಗಳ ರವರು ಮಾತನಾಡಿ,ಮೂರು ವರ್ಷಕ್ಕೊಮ್ಮೆ ಬರುವ ಅಧಿಕ ಮಾಸದಲ್ಲಿ ಆಧ್ಯಾತ್ಮಿಕ ಚಿಂತನೆಗೆ ಒತ್ತು ನೀಡಿ ಸಮಾಜದ ಪ್ರಗತಿಗೆ ಯುವಕರಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ನೀಡಿ ಇಷ್ಟಲಿಂಗಪೂಜೆ, ಲಿಂಗಧಾರಣೆ ಮಾಡುವುದರ ಮೂಲಕ ಇಡೀ ಸಮಾಜಕ್ಕೆ ಹೊಳಿತನ್ನು ಬಯಸುವವರು ಜಂಗಮರು ಎಂದುಆರ್ಶಿವಚನ ನೀಡಿದರು.ಗಚ್ಚಿನ ಮಠದ ಶ್ರೀ ಷ.ಬ್ರ ವರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ,ಅಧಿಕ ಮಾಸದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಒಳ್ಳೆಯ



ಸಂಸ್ಕಾರದ ಸಂಸ್ಕೃತಿಗಳ ಬಗ್ಗೆ ಕಿವಿಮಾತು ಹೇಳಿದರು ಶರಭಯ್ಯಸ್ವಾಮಿ ಬಳಗಾನೂರ ಹಾಗೂ ತಾಲ್ಲೂಕ ಅದ್ಯಕ್ಷ ಘನಮಠದಯ್ಯ ಸಾಲಿಮಠ, ಕಾರ್ಯಕ್ರಮದ ಕುರಿತು ಮಾತನಾಡಿದರು,ಈ ವೇಳೆ,ಶಿವಶಂಕ್ರಯ್ಯ ಸ್ವಾಮಿ ಗಚ್ಚಿನಮಠ,ಆದಯ್ಯ ಸ್ವಾಮಿ ಕ್ಯಾತ್ನಟ್ಟಿ , ವಿರೇಶ ಪಾಟೀಲ್, ಪಂಚಾಕ್ಷರಯ್ಯ ಹಿರೇಮಠ , ಸಿದ್ದಯ್ಯಸ್ವಾಮಿ ಹಾಲಾಪೂರ, ಶರಣಯ್ಯಸ್ವಾಮಿ ದಿನ್ನಿಮಠ ಹಾಗೂ ಜಂಗಮ ಸಮಾಜದ ಯುವ ಘಟಕದ ಅದ್ಯಕ್ಷ ಸಿದ್ದಯ್ಯ ಹೆಸರೂರು ಹಿರೇಮಠ,ಕಾರ್ಯದರ್ಶಿ ವೀರೇಶ ಹಿರೇಮಠ ಕ್ಯಾತ್ನಟ್ಟಿ,ಅಮರಯ್ಯಸ್ವಾಮಿ ಸೊಪ್ಪಿಮಠ,ಶಿವಕುಮಾರ ಶಾಸ್ತ್ರಿಮಠ, ಮಹೇಶ ಕೊಟ್ಟೂರಮಠ,ಅಮರೇಶ ಹೊಸಮಠ,ಮಲ್ಲಯ್ಯ ಸ್ವಾಮಿ ವಸ್ತ್ರದ, ಮಲ್ಲಯ್ಯ ಸ್ವಾಮಿ ಸಿರವಾರಮಠ, ಪೂರ್ಣಿಮಾ ಪಾಟೀಲ್, ಅಂಬಿಕಾ ಹೆಸರೂರು,ಶಾರದ ಸರಗಣಾಚಾರಿ,ಶಿವಲೀಲಾ ಗಚ್ಚಿನಮಠ, ಸೇರಿದಂತೆ ಮಸ್ಕಿ ತಾಲ್ಲೂಕಿನ ವಿವಿಧ ಹಳ್ಳಿಗಳಿಂದ ಜಂಗಮ ಸಮಾಜದ ಬಂಧಗಳು ಇದ್ದರು.

# ಅಕ್ರಮ ಮರಳು ಗಣಿಗಾರಿಕೆಗೆ ನಡುಗಿದ ಕಂಪ್ಲಿ : ಎಗ್ಗಿಲ್ಲದೇ ಸಾಗಾಟ ನಡೆದ ಮರಳು ದಂಧೆ : ಬರಿದಾದ ತುಂಗಭದ್ರ ಒಡಲು

**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ: ತಾಲ್ಲೂಕಿನಲ್ಲಿ ಸರ್ಕಾರದ ಮರುಳು ಕೇಂದ್ರವಿಲ್ಲದಿದ್ದರೂ ಸಹಿತ ಪ್ರತಿದಿನ ಪಟ್ಟಣದಲ್ಲಿ ಅಕ್ರಮ ಮರುಳು ದಂಧೆ ಅವ್ಯಾಹಿತವಾಗಿ ನಡೆಯುತ್ತಿದ್ದು, ಅಕ್ರಮ ಮರುಳು ದಂಧೆಗೆ ಕಡಿವಾಣ ಯಾವಾಗ ? ಎಂದು ಪ್ರಜ್ಞಾವಂತರು ಪ್ರಶ್ನಿಸುತ್ತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಮರುಳು ದಂಧೆಕೋರರಿಂದ ತುಂಗಭದ್ರೆಯ ಒಡಲು ಬರಿದಾಗುತ್ತಿದೆ. ಕಂಪ್ಲಿ–ಕೋಟೆ ಮತ್ತು ತಾಲ್ಲೂಕಿನ ಸರಹದ್ದಿನಲ್ಲಿ ತುಂಗಭದ್ರಾ ನದಿ ಹರಿದು ಹೋಗಿದ್ದು, ಈ ಭಾರಿ ಜಲಾಶಯದ ಕ್ರಸ್ಟ್ ಗೇಟ್‌ಗಳನ್ನು ಅಳವಡಿಸುವ ಹಿನ್ನೆಲೆಯಲ್ಲಿ ಜಲಾಶಯದಲ್ಲಿ ಸಂಗ್ರಹವಾಗಿದ್ದ ನೀರನ್ನು ನಿರಂತರವಾಗಿ ನದಿಗೆ ಬಿಟ್ಟ ಪರಿಣಾಮ ನದಿಯಲ್ಲಿ ಭಾರಿ ಪ್ರಮಾಣದಲ್ಲಿ ಮರಳು ಸಂಗ್ರಹವಾಗಿದ್ದು. ಮರಳುದಂಧೆ ಕೋರರಿಗೆ ಅಕ್ರಮವಾಗಿ ಮರಳು ಸಾಗಾಟಕ್ಕೆ ಅನುಕೂಲವಾಗಿದೆ. ಕಂಪ್ಲಿ–ಕೋಟೆಯ ತುಂಗಭದ್ರಾ ನದಿಯಲ್ಲಿ ಕಂಪ್ಲಿ ಭಾಗದಲ್ಲಿ ಮತ್ತು ಗಂಗಾವತಿ ತಾಲ್ಲೂಕಿನ ಚಿಕ್ಕಜಂತಕಲ್ ಭಾಗದಲ್ಲಿ ಪ್ರತಿದಿನ ಬೆಳಗಿನ ಜಾವವೇ ಹಲವಾರು ಹರಗೋಲಿನ ಮೂಲಕ ಮರಳನ್ನು ತೆಗೆಯುವ ಕಾಯಕ ನಿರಂತರವಾಗಿ ನಡೆಯುತ್ತದೆ. ನದಿಯಿಂದ ಹರಗೋಲಿನ ಮುಲಕ ತರುವ ಮರಳನ್ನು ನದಿ ತೀರದಲ್ಲಿ ಸಂಗ್ರಹಿಸಿ ಅದನ್ನು ಎತ್ತಿನ ಬಂಡಿಗಳ ಮೂಲಕ, ಟ್ರ್ಯಾಕ್ಟರ್ ಗಳ ಮೂಲಕ ಬೇರೆಡೆಗೆ ಸಾಗಿಸಿ ಅಲ್ಲಿಂದ ಟಿಪ್ಪರ್‌ಗಳ ಮೂಲಕ ಸಾಗಾಟ ಮಾಡುತ್ತಿರುವ ಸಂಗತಿಗಳು ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬರುತ್ತಿವೆ.ಪಟ್ಟಣದಲ್ಲಿ ಸರ್ಕಾರದ ಅಧಿಕೃತ



ಮರಳು ಕೇಂದ್ರವಿಲ್ಲದಿದ್ದರೂ ಸಹಿತ ಪ್ರತಿದಿನ ಹಲವಾರು ಬೃಹತ್ ಟಿಪ್ಪರ್‌ಗಳಲ್ಲಿ, ಲಾರಿಗಳಲ್ಲಿ, ಟ್ರಾಕ್ಟರ್‌ಗಳಲ್ಲಿ ಮತ್ತು ಎತ್ತಿನ ಬಂಡಿಗಳಲ್ಲಿ ಮರಳು ಸಾಗಾಟವಾಗುತ್ತಿದ್ದರೂ ಸಹಿತ ಸಂಬಂಧಪಟ್ಟ ಅಧಿಕಾ–ರಿಗಳು ಮಾತ್ರ ತಮಗೇನೂ ಗೊತ್ತಿಲ್ಲದಂತೆ ವರ್ತಿಸುತ್ತಿರುವುದನ್ನು ನೋಡಿದರೆ ಸಾರ್ವಜನಿಕರಲ್ಲಿ ಸಂಶಯ ಮೂಡುವಂತೆ ಮಾಡಿದೆ. ಬೆಳಿಗ್ಗೆ ಮರಳು ಸಂಗ್ರಹಿಸುವವರು ಅದನ್ನು ಸುರಕ್ಷಿತ ಪ್ರದೇಶದಲ್ಲಿ ದಾಸ್ತಾನು ಮಾಡಿ ನಂತರ ಸಂಜೆ, ರಾತ್ರಿ ಹಾಗೂ ಬೆಳಗಿನ ಜಾವದ ಸಮಯದಲ್ಲಿ ಬೃಹತ್ ವಾಹನಗಳ ಅಗತ್ಯಕ್ಕೆ ತಕ್ಕಂತೆ ದುಪ್ಪಟ್ಟು ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡು ಬರುತ್ತಿದೆ.ಪಟ್ಟಣದ ಕೆಲವು ಬಡಾವಣೆಗಳಲ್ಲಿ ರಾತ್ರಿ ಹಾಗೂ ಬೆಳಗಿನ ಜಾವ ಬೃಹತ್ ವಾಹನಗಳಲ್ಲಿ ಮರಳು ಸಾಗಾಟ ಮಾಡುತ್ತಿರುವುದ–ರಿಂದ ಬಡಾವಣೆಯ ಜನತೆ ರೋಸಿ ಹೋಗಿದ್ದಾರೆ. ಮರಳು ತುಂಬಿದ ವಾಹನಗಳನ್ನು ವೇಗವಾಗಿ ಓಡಿಸುವುದರಿಂದ ಚಿಕ್ಕಚಿಕ್ಕ ಮಕ್ಕಳು, ವೃದ್ಧರ ಪರಿಸ್ಥಿತಿ ಏನು ಎಂದು ಪ್ರಶ್ನಿಸುತ್ತಿದ್ದಾರೆ. ಒಟ್ಟಾರೆ ಅಕ್ರಮ ಮರಳು ದಂದೆ ಕೆಲವರಿಗೆ ಅನುಕೂಲವಾಗಿದ್ದರೆ ಮತ್ತೆ ಕೆಲವರಿಗೆ ಪ್ರಾಣ ಸಂಕಟವಾಗಿದೆ. ಇತ್ತೀಚೆಗೆ ಕಂಪ್ಲಿಗೆ ಭೇಟಿ ನೀಡಿದ್ದ ಬಳ್ಳಾರಿ ಸಹಾಯಕ ಆಯುಕ್ತರಾಗಿರುವ ಎಚ್.ಡಿ ರಾಜೇಶ್ ಅವರು ತಾಲ್ಲೂಕಿನ ಸಣಾಪುರ ಗ್ರಾ.ಪಂ. ವ್ಯಾಪ್ತಿಯಲ್ಲಿ ಸರ್ಕಾರದಿಂದ ಮರಳು ಕೇಂದ್ರವನ್ನು ಗುರುತಿಸಲಾಗಿದ್ದು, ಆದ–ಷ್ಟು ಶೀಘ್ರವಾಗಿ ಟೆಂಡರ್ ಕರೆಯಲಾಗುವುದು ತಿಳಿಸಿದ್ದರು. ಹಾಗೂ ಅಕ್ರಮ ಮರಳು ಸಾಗಾಟದ ಬಗ್ಗೆ ಸಂಬಂಧಿಸಿದ ಇಲಾಖೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದರು. ಆದರೂ, ಕಂಪ್ಲಿ ಪಟ್ಟಣದಲ್ಲಿ ಅಕ್ರಮ ಮರಳು ದಂದೆಗೆ ಮಾತ್ರ ಕಡಿವಾಣ ಇಲ್ಲದಂತಾಗಿದೆ. ಆದರೆ, ಈ ಬಗ್ಗೆ ಕ್ರಮ ಕೈಗೊಳ್ಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಇದ್ದು ಇಲ್ಲದಂತಾಗಿದೆ.

**ಕೋಟ್ – ಕಂಪ್ಲಿ–ಕೋಟೆಯಲ್ಲಿ ಬೆಳಗಿನ ಜಾವದ ವೇಳೆಯಲ್ಲಿ ಹರಗೋಲಿನಲ್ಲಿ ಅಕ್ರಮವಾಗಿ ಮರಳು ತೆಗೆಯುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಹರಗೋಲು ಮಾಲೀಕರಿಗೆ ಅಕ್ರಮವಾಗಿ ಮರಳು ತೆಗೆಯದಂತೆ ಸೂಚಿಸಲಾಗಿದೆ. ಆದ–ರೂ, ಇನ್ನು ಅಕ್ರಮ ಮರಳುದಂಥೆ ನಡೆಯುತ್ತಿದ್ದು, ಶೀಘ್ರವಾಗಿ ದಾಳಿ ನಡೆಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಜೂಗಲ್ ಮಂಜುನಾಯಕ, ತಹಶೀಲ್ದಾರ್, ಕಂಪ್ಲಿ.**




ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587

# ಎನ್.ಎಸ್.ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

**ನೈಜ್ಯ ದೆಸೆ ನ್ಯೂಸ್**

ಕವಿತಾಳ : 'ಕಳೆದ ಐವತ್ತು ವರ್ಷಗಳಿಂದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆ ಸೇ–ರಿದಂತೆ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸವನ್ನು ನಿರ್ವಹಿಸುವ ಮೂಲಕ ಅತೀ ಹೆಚ್ಚು ಕಾಂಗ್ರೆಸ್ ಶಾಸಕರನ್ನು, ಸಂಸದರನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವ ಎನ್. ಎಸ್. ಬೋಸರಾಜು ಅವರಿಗೆ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಸೂಕ್ತ ಸಚಿವ ಸ್ಥಾನ ನಿಡಬೇಕು' ಎಂದು ವಾಲ್ಮೀಕಿ ವಿಶ್ವವಿದ್ಯಾಲಯದ ಸಿಂಡಿಕೆಟ್ ಸದಸ್ಯ ಹಾಗೂ ಹಾಲುಮತ ಮಹಾಸಭಾದ ರಾಯಚೂರು ಜಿಲ್ಲಾ ಅಧ್ಯಕ್ಷ ಶಿವಣ್ಣ ವಕೀಲರು ಒತ್ತಾಯಿಸಿದ್ದಾರೆ. ಅವರು ಇಂದು ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಂಡು



ಮಾತನಾಡಿದರು.'ನಮ್ಮ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರ, ಸಂಸದರ ಆಯ್ಕೆಗಾಗಿ ಸತತ ಪ್ರಯತ್ನವನ್ನು ಮಾಡುವ ಮುಲಕ ಕಾಂಗ್ರೆಸ್ ಪಕ್ಷಕ್ಕಾಗಿ ತಮ್ಮ ಜೀವನವನ್ನೆ ಮುಡುಪಾಗಿಟ್ಟುರುವ ಹಿರಿಯರು ಇವರಾಗಿದ್ದು, ರಾಜ್ಯ ಮಾತ್ರವಲ್ಲದೆ ರಾಷ್ಟ್ರದ ರಾಜಕೀಯದಲ್ಲೂ ಇವರ ಪಾತ್ರ ಪ್ರಮುಖವಾಗಿದೆ ಅಲ್ಲದೆ ಕಳೆದ ಸಿದ್ದಾರಾಮಯ್ಯ ಸರ್ಕಾರದಲ್ಲಿ ಸಣ್ಣ ನೀರಾವರಿ ,ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಕೆಲಸ ನಿರ್ವಹಿಸಿದ ಅವರು ಅತೀ ಹೆಚ್ಚು ಕರ್ನಾಟಕದ ಇತಿಹಾಸದಲ್ಲಿ ಚೆಕ್‌ಡ್ಯಾಮ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವುದರ ಮೂಲಕ ಮತ್ತು ಬೋರ್ವೆಲ್‌ಗಳನ್ನು ಹಾಗೂ ಭಾವಿಗಳ ರಿಪಿಲ್ಬರ್ ಆಗಿ ರೈತ ವರ್ಗಕ್ಕೆ ಆಶಾಕಿರಣ ವಾಗುವಂತಹ ಕೆಸವನ್ನು ಮಾನ್ಯ ಸಚಿವರು ಮಾಡಿದ್ದಾರೆ ಹಾಗೂ ಜನಮನ ಗೆದ್ದ ನಾಯಕತ್ವ ,ಪಾರದರ್ಶಕ ಆಡಳಿತ, ಅಕ್ಕರೆಯ ಪ್ರತಿರೂಪ, ಸಾಮಾಜಿಕ ನ್ಯಾಯ ಕಲ್ಪನೆ ಆದ–ಾರದ ಮೇಲೆ ಕಾರ್ಯ ನಿರ್ವಹಿಸುವ ಅವರು ಸಚಿವರಾಗಿ ಪ್ರಾಮಾಣಿಕ ಜನಸೇವೆ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ ಆದ್ದರಿಂದ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನವನ್ನು ನೀಡಬೇಕು ಎಂದು ಆಗ್ರಹಿಸಲಾಗುವುದು' ಎಂದರು. ನಮ್ಮ ರಾಯಚೂರು ಜಿಲ್ಲೆಯ ಉಸ್ತುವಾರಿ ಸಚಿವ ಸ್ಥಾನವನ್ನು ಸ್ಥಳಿಯ ನಾಯಕರಿಗೆ ನೀಡುವಲ್ಲಿ ಮುಂದಾಗಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಲಿಯಾಖತ್ ಅಲಿ ಜೆಡಿಎಸ್, ರಾಜೇಶ್ ಬನ್ನಿಗಿಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಾಳಪ್ಪ ತೋಳ, ಪಟ್ಟಣ ಪಂಚಾಯತಿ ನಾಮನಿರ್ದೇಶಕ ಸದಸ್ಯ ಅಯ್ಯಪ್ಪ ನಿಲೋಗಲ್, ಸಿದ್ದಪ್ಪ ದಡ್ಯಾಳ್ ಇದ್ದರು.


## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಎಲೆಕ್ಟ್ರಾನಿಕ್ ಮೆಕ್ಯಾನಿಕ್

ಐಟಿಐ ಎಲೆಕ್ಟ್ರಾನಿಕ್ ಮೆಕ್ಯಾನಿಕ್ (Electronics Mechanic) ಕೋರ್ಸ್ 2 ವರ್ಷಗಳ ಅವಧಿಯ ವೃತ್ತಿಪರ ತರಬೇತಿಯಾಗಿದೆ. ಇದು ಎಲೆಕ್ಟ್ರಾನಿಕ್ ಉಪಕರಣಗಳ ಸ್ಥಾಪನೆ, ನಿರ್ವಹಣೆ ಮತ್ತು ರಿಪೇರಿ ಕೌಶಲ್ಯಗಳನ್ನು ಕಲಿಸುತ್ತದೆ. 10ನೇ ತರಗತಿಯ ನಂತರ ಸೇರಬಹುದಾದ ಈ ಕೋರ್ಸ್, ಕೈಗಾರಿಕೆಗಳಲ್ಲಿ ತಾಂತ್ರಿಕ ಉದ್ಯೋಗ ಪಡೆಯಲು ಅತ್ಯುತ್ತಮವಾಗಿದೆ.ಐಟಿಐ ಎಲೆಕ್ಟ್ರಾನಿಕ್ ಕೋರ್ಸ್ ವಿವರಗಳು (Kannada):ಕೋರ್ಸ್ ಹೆಸರು: ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ (Electronics Mechanic) ಅವಧಿ: 2 ವರ್ಷಗಳು (ವಾರ್ಷಿಕ ಪದ್ಧತಿ)ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತದೊಂದಿಗೆ) ಕಲಿಯುವ ವಿಷಯಗಳು: ಎಲೆಕ್ಟ್ರಾನಿಕ್ ಘಟಕಗಳು (components), ಸರ್ಕ್ಯೂಟ್ ಡಯಾಗ್ರಾಮ್‌ಗಳು, ಟಿವಿ, ರೇಡಿಯೋ, ಮೊಬೈಲ್ ರಿಪೇರಿ, ಸಿಸಿಟಿವಿ ಸ್ಥಾಪನೆ ಮತ್ತು ಇತರ ಎಲೆಕ್ಟ್ರಾನಿಕ್ ಉಪಕರಣಗಳ ನಿರ್ವಹಣೆ.ಉದ್ಯೋಗಾವಕಾಶಗಳು: ಎಲೆಕ್ಟ್ರಾನಿಕ್ ಉಪಕರಣಗಳ ತಂತ್ರಜ್ಞ (Technician), ಸರ್ವಿಸ್ ಇಂಜಿನಿಯರ್, ಮೆಕ್ಯಾನಿಕ್, ಮತ್ತು ಸ್ವಯಂ ಉದ್ಯೋಗ (ರಿಪೇರಿ ಅಂಗಡಿ).ಕೋರ್ಸ್ ಮುಖ್ಯಾಂಶಗಳು:ಈ ತರಬೇತಿಯು ಪ್ರಾಯೋಗಿಕ (Practical) ಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುತ್ತದೆ.ಸರ್ಕಾರಿ ಮತ್ತು ಖಾಸಗಿ ಐಟಿಐ ಕಾಲೇಜುಗಳಲ್ಲಿ ಲಭ್ಯವಿದೆ.ಶಿಕ್ಷಣದ ನಂತರ ಓಅಗಿಖ (National Council for Vocational Training) ಪ್ರಮಾಣಪತ್ರ ನೀಡಲಾಗುತ್ತದೆ.

## ಬಂಗಾರದ ಆಸೆಗೆ ವಿಘ್ನೇಶ್ವರನ ವಿಗ್ರಹವೇ ಭಗ್ನ ಹದಿನೈದೇ ದಿನದಲ್ಲಿ ಕಳ್ಳರ ಹೆಡೆಮುರಿ ಕಟ್ಟಿದ ಬಳಗಾನೂರು ಆರಕ್ಷಕರು

ನೈಜ್ಯ ದೆಸೆ ನ್ಯೂಸ್



ಬಳಗಾನೂರು: ಬಂಗಾರದ ಆಸೆಗೆ ಕಳ್ಳರು ದೇವರ ವಿಗ್ರಹವನ್ನೇ ಭಗ್ನಗೊಳಿಸಿರುವ ಅಮಾನವೀಯ ಘಟನೆ ಬಳಗಾನೂರಿನಲ್ಲಿ ನಡೆದಿದ್ದು, ಪ್ರಕರಣ ನಡೆದ ಕೇವಲ ಹದಿನೈದೇ ದಿನದಲ್ಲಿ ಆರೋಪಿಗಳನ್ನು ಬಂಧಿಸುವ ಮೂಲಕ ಆರಕ್ಷಕರು ಶ್ಲಾಘನೀಯ ಕಾರ್ಯಾಚರಣೆ ನಡೆಸಿದ್ದಾರೆ.ಬಳಗಾನೂರು ಪಟ್ಟಣದ ಆರಾಧ್ಯ ದೈವವಾದ ಬಂಧುಶತಪುರೇಶನ ದೇವಸ್ಥಾನದ ಆವರಣದಲ್ಲಿದ್ದ ನಿಂತ ಭಂಗಿಯ ಬಲಮುರಿ ವಿಘ್ನೇಶ್ವರನ ವಿಗ್ರಹವನ್ನು ಮೇ 14ರ ರಾತ್ರಿ ದುಷ್ಕರ್ಮಿಗಳು ಕದ್ದೊಯ್ದಿದ್ದರು. ಈ ಕುರಿತು ದೇವಸ್ಥಾನದ ಕಾರ್ಯದರ್ಶಿ ಅಮರೇಶ ಅವರು ಬಳಗಾನೂರು ಠಾಣೆಯಲ್ಲಿ ಲಿಖಿತ ದೂರು ದಾಖಲಿಸಿದ್ದರು. ಪ್ರಕರಣ ಸಂಖ್ಯೆ 86/2026 ದಾಖಲಿಸಿಕೊಂಡ ಆರಕ್ಷಕರು ತನಿಖೆ ಆರಂಭಿಸಿದರು.ಪ್ರಕರಣದ ತನಿಖೆ ಆರಂಭಿಸಿದ ಪೊಲೀಸರಿಗೆ ಸಾಕಷ್ಟು ಅಡೆತಡೆಗಳು ಎದುರಾದವು. ದೇವಸ್ಥಾನದ ಆವರಣದಲ್ಲಿದ್ದ ಸಿಸಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿರಲಿಲ್ಲ. ದೇವಸ್ಥಾನದ ಮುಂಭಾಗದ ಕ್ಯಾಮೆರಾವೂ ಬಂದ್ ಆಗಿತ್ತು. ಅಲ್ಲದೆ ನಾರಾಯಣನಗರ ಕ್ಯಾಂಪ್ ಮಾರ್ಗದಲ್ಲಿ ಯಾವುದೇ ಸಿಸಿ ಕ್ಯಾಮೆರಾಗಳು ಇಲ್ಲದಿರುವುದು ತನಿಖೆಗೆ ದೊಡ್ಡ ಸವಾಲಾಗಿತ್ತು. ಆದರೂ ತಂತ್ರಜ್ಞರ ತಂಡದ ನೆರವಿನಿಂದ ಆರಕ್ಷಕರು ಮಿಂಚಿನ ಕಾರ್ಯಾಚರಣೆ ನಡೆಸಿ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾದರು.ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಆರು ಮಂದಿಯ ಪೈಕಿ ಸುಮಾರು 25 ವರ್ಷ ವಯಸ್ಸಿನ ದೇವರಾಜ, ಮೌನೇಶ ಹಾಗೂ ಅಮರೇಶ ಎಂಬ ಮೂವರು ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.ವಿಚಾರಣೆ ವೇಳೆ ಆರೋಪಿಗಳು "ವಿಗ್ರಹದಲ್ಲಿ ಬಂಗಾರ ಇರಬಹುದೆಂಬ ಆಸೆಯಿಂದ ಕಳವು ಮಾಡಿದ್ದೇವೆ. ಬಳಿಕ ಸುತ್ತಿಗೆಯಿಂದ ಒಡೆದು ಚೂರು ಚೂರು ಮಾಡಿದ್ದೇವೆ. ಆದರೆ ಬಂಗಾರ ಸಿಗದ ಕಾರಣ ಅದನ್ನು ಅಲ್ಲೇ ಬಿಟ್ಟು ಹೋಗಿದ್ದೇವೆ" ಎಂದು ಹೇಳಿರುವುದಾಗಿ ತಿಳಿದುಬಂದಿದೆ. ಪ್ರಕರಣದ ಹಿಂದೆ ಬೆಂಗಳೂರು ಮೂಲದ ಕೆಲ ಆರೋಪಿಗಳೇ ಮಾಸ್ಟರ್ ಮೈಂಡ್ ಆಗಿರುವ ಶಂಕೆ ವ್ಯಕ್ತವಾಗಿದ್ದು, ಅವರನ್ನು ಬಂಧಿಸಲು ಆರಕ್ಷಕರು ಬಲೆ ಬೀಸಿದ್ದಾರೆ ಎನ್ನಲಾಗಿದೆ. ಆದರೆ ಕಳುವಾಗಿದ್ದ ವಿಘ್ನೇಶ್ವರನ ವಿಗ್ರಹ ಭಗ್ನಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿರುವುದು ಭಕ್ತರಲ್ಲಿ ತೀವ್ರ ಬೇಸರ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ. "ದೇವಸ್ಥಾನದ ಆವರಣದೊಳಗಿನ ವಿಗ್ರಹವನ್ನೇ ಹೊತ್ತುಕೊಂಡು ಹೋಗಿರುವ ಕಳ್ಳರು, ನಾಳೆ ಗರ್ಭಗುಡಿಯೊಳಗಿನ ಬಂಧುಶತಪುರೇಶನ ವಿಗ್ರಹವನ್ನೇ ಕಳವು ಮಾಡುವುದಿಲ್ಲ ಎನ್ನುವುದಕ್ಕೆ ಏನು ಗ್ಯಾರಂಟಿ?" ಎಂದು ಭಕ್ತರು ಆತಂಕ ವ್ಯಕ್ತಪಡಿಸಿದ್ದಾರೆ.ಈ ಹಿನ್ನೆಲೆಯಲ್ಲಿ ದೇವಸ್ಥಾನದ ಸಮಿತಿ ಪದಾಧಿಕಾರಿಗಳು, ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ದೇವಸ್ಥಾನಕ್ಕೆ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಂಡು ಭಕ್ತರಲ್ಲಿ ನಿರಾತಂಕದ ಭಾವನೆ ಮೂಡಿಸಬೇಕಾಗಿದೆ. ದೇವಸ್ಥಾನ ಆವರಣದಲ್ಲಿ ಸುಸಜ್ಜಿತ ಸಿಸಿ ಕ್ಯಾಮೆರಾಗಳ ಅಳವಡಿಕೆ, ರಾತ್ರಿ ಗಸ್ತು ಹಾಗೂ ಭದ್ರತಾ ವ್ಯವಸ್ಥೆ ಬಲಪಡಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.ಇದರ ನಡುವೆಯೂ ಸಂಕೀರ್ಣ ಪರಿಸ್ಥಿತಿಯಲ್ಲಿ ಆರೋಪಿಗಳನ್ನು ಪತ್ತೆಹಚ್ಚಿದ ಬಳಗಾನೂರು ಆರಕ್ಷಕರ ಕಾರ್ಯಾಚರಣೆಯನ್ನು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಸಡಗರ ಸಂಭ್ರಮದಿಂದ 190 ನೇ ಮಹಾಮನೆ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಇಲ್ಲಿನ ಗಂಗಾ ಸಂಕೀರ್ಣದಲ್ಲಿ ತಾ*ಲೂಕು ಶರಣ ಸಾಹಿತ್ಯ ಪರಿಷತ್ ಶುಕ್ರವಾರ ಹಮ್ಮಿಕೊಂಡಿದ್ದ 190ನೇ ಮಹಾಮನೆ ಕಾರ್ಯಕ್ರಮ ಸಡಗರ ಸಂಭ್ರಮಗಳಿಂದ ನಡೆಯಿತು. ಚಿಕ್ಕಜಾಯಿಗನೂರಿನ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಮುದುಕಪ್ಪ ನೆಲಜೇರಿ 'ನಿತ್ಯ ಜೀವನದಲ್ಲಿ ಶರಣರ ಸಿದ್ಧಾಂತ ಮಹತ್ವ' ಉಪನ್ಯಾಸ ನೀಡಿ, ನಿತ್ಯ ಜೀವನದಲ್ಲಿ ಶರಣ ಸಿದ್ಧಾಂತಗಳನ್ನು ಅಳವಡಿಸಿಕೊಂಡಲ್ಲಿ ಅರ್ಥಪೂರ್ಣ ಜೀವನ ಸಾಗಿಸಲು ಸಾಧ್ಯ. ವಚನ ಸಾಹಿತ್ಯದ ಅಧ್ಯಯನದಿಂದ ವೈಚಾರಿಕ ಪ್ರಬುದ್ಧತೆಗಳಿಸಬಹುದಾಗಿದೆ. ಒಂದೊಂದು ವಚನವು ಒಂದು ಮಹಾಕಾವ್ಯಕ್ಕೆ ಸಮವಾಗಿವೆ. ಮೂಢನಂಬಿಕೆ, ಅಜ್ಞಾನ ತೊಲಗಿಸಿ ಸಮಾನತೆಯ ಸಮಾಜ ನಿರ್ಮಿಸುವುದು ಶರಣರ ನಿಲುವು ಆಗಿತ್ತು. ಜಗತ್ತಿನ ಜನತೆ ಸಾಮರಸ್ಯದಿಂದ ಬದುಕುವಂತೆ ಜಾಗೃತಿಗೊಳಿಸುವ ತಿರುಳು ವಚನ ಸಾಹಿತ್ಯದಲ್ಲಿದೆ. ಶಿಕ್ಷಣದ ಎಲ್ಲಾ ಹಂತಗಳಲ್ಲೂ ವಚನ, ವಚನ ಸಾಹಿತ್ಯ ಮಹತ್ವ ಪಠ್ಯವಾಗಬೇಕಿದೆ ಎಂದರು. ರಂಗಭೂಮಿ ಕಲಾವಿದ ಜೀರು ಮಲ್ಲಿಕಾರ್ಜುನ ಮಾತನಾಡಿ, ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾನತೆಗಾಗಿ ಶ್ರಮಿಸಿದರು. ಮಕ್ಕಳು, ಯುವಜನತೆ ಮೊಬೈಲ್ ಗೀಳಿಗೆ ಈಡಾಗುತ್ತಿದ್ದು ನೆಮ್ಮದಿ ಕಸಿದಿದೆ. ಮೊಬೈಲ್‌ರಹಿತ ಜೀವನ ನಡೆಸುವುದು ಕಷ್ಟಕರ ಎಂಬಂತಾಗಿದೆ ಎಂದರು.ಲಿಂಗಾಯತ ಮಹಾಸಭಾದ ತಾಲೂಕು ಪದಾಧಿಕಾರಿ ಬಿ.ಎಂ.ರುದ್ರಯ್ಯ ಅಧ್ಯಕ್ಷತೆವಹಿಸಿ ಮಾತನಾಡಿ, ಸಮಾಜದಲ್ಲಿ ಶರಣರ ನಡೆನುಡಿ ಕಣ್ಮರೆಯಾಗುತ್ತಿದ್ದು ಜ್ಯೋತಿಷಿಗಳು ಹೆಚ್ಚಾಗುತ್ತಿದ್ದಾರೆ. ವಚನ ಸಾಹಿತ್ಯ ಸಂರಕ್ಷಿಸುವಲ್ಲಿ ಫ.ಗು.ಹಳಕಟ್ಟಿಯವರ ಶ್ರಮ ಮಹತ್ವದ್ದಾಗಿದೆ. ಮಕ್ಕಳಿಗೆ ವಚನಗಳನ್ನು ಕಲಿಸಬೇಕು ಎಂದರು. ಪರಿಷತ್ ಕಾರ್ಯಾಧ್ಯಕ್ಷ ಬಂಗಿ ದೊಡ್ಡ ಮಂಜುನಾಥ, ಪದಾಧಿಕಾರಿಗಳಾದ ಚಂದ್ರಯ್ಯ ಸೊಪ್ಪಿಮಠ, ಎಸ್.ಶಾಮಸುಂದರರಾವ್, ಡಾ.ಬಿ.ಸುನಿಲ್, ಎಸ್.ಡಿ.ಬಸವರಾಜ, ಎಲಿಗಾರ ವೆಂಕಟರೆಡ್ಡಿ, ಅಶೋಕ ಕುಕನೂರು, ಸೋಗಿ ಸಂತೋಷ, ಬಡಿಗೇರ ಜಿಲಾನ್‌ಸಾಬ್, ನಟರಾಜ ಸಾಮಂತ್ರಿ, ಗವಿವೀರನಗೌಡ, ಬಿಎಚ್‌ಎಂ ಚಂದ್ರಮಹೇಶಶಾಸ್ತ್ರಿ ಸೇರಿ ಇತರರಿದ್ದರು.

# ಕಂಪ್ಲಿಯಲ್ಲಿ ಸಡಗರದ ಬಕ್ರೀದ್ ಹಬ್ಬದ ಆಚರಣೆ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ: ತ್ಯಾಗ ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಮುಸ್ಲಿಂರು ಗುರುವಾರ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದ ಮುಸ್ಲಿಂರು ಖದಿಂ ಈದ್ಗಾ ಮೈದಾನದಲ್ಲಿ ತೆರಳಿ ಸಾಮೂಹಿಕ ವಿಶೇಷ ಪ್ರಾರ್ಥನೆ ಸಲ್ಲಿಸಿದರು.ತ್ಯಾಗವನ್ನು ನೆನಪಿಸುವುದು 'ಬಕ್ರೀದ್'ನ ಮುಖ್ಯ ಆಶಯ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದು, ಸೋದರತ್ವ ಬೆಳೆಸಿಕೊಳ್ಳುವುದು, ದೇವನಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗಬೇಕು ಎಂಬ ಸಂದೇಶವನ್ನು ಈ ಹಬ್ಬ ಸಾರುತ್ತದೆ. ಅಲ್ಲಾಹನ ಆದೇಶದಂತೆ ಇಬ್ರಾಹಿಂ, ತಮ್ಮ ಪುತ್ರ ಇಸ್ಮಾಯಿಲ್ ಅವರನ್ನು ಬಲಿದಾನ ನೀಡಲು ಮುಂದಾಗುವರು ತಮ್ಮ ಮಗನನ್ನೇ ಬಲಿ ನೀಡಲು ಸಿದ್ಧವಾಗಿದ್ದ ಇಬ್ರಾಹಿಂ ಅವರ ಭಕ್ತಿಯನ್ನು ಅಲ್ಲಾಹನು ಮೆಚ್ಚಿ ಪುತ್ರನ ಬದಲು ಒಂದು ಟಗರನ್ನು ಬಲಿ ಅರ್ಪಿಸುವಂತೆ ಸೂಚಿಸುತ್ತಾರೆ ಎಂದು ಮುಸ್ಲಿಮರ ಧರ್ಮಗ್ರಂಥದಲ್ಲಿ ತಿಳಿಸಲಾಗಿದೆ ಎಂದು ಮುಸ್ಲಿಂ ಧರ್ಮ ಗುರುಗಳಾದ ಸೈಯದ್ ಷಾಹ್ ಅಬುಲ್ ಹಸನ್ ಖಾದ್ರಿ ಉರಫ್ ಆಜಂ ಪಾಷಾ ಖಾದ್ರಿ ಸಾಹೇಬ್ ತಿಳಿಸಿದರು.ಅವರು ಹೊಸ ಬಸ್ ನಿಲ್ದಾಣದ ಹತ್ತಿರ ಇರುವ ಮುದ್ದಾಪುರ ರಸ್ತೆಯಲ್ಲಿ ಇರುವ ಖದಿಂ ಸುನ್ನಿ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ವೇಳೆ ಪ್ರವಚನ ನೀಡಿ ಮಾತನಾಡಿದರು.ಹಬ್ಬದ ಸಂದೇಶ ಸಾರಿ, ದಾನ – ಧರ್ಮದ ಮಹತ್ವ ಕುರಿತು ಬೋಧನೆ ಮಾಡಿದರು. ಸಮಾಜದಲ್ಲಿ ಎಲ್ಲರೊಂದಿಗೂ ಸಹೋದರರಂತೆ ಬಾಳುವಂತೆ ಕರೆ ನೀಡಿದರು.ಈ ಸಂದರ್ಭದಲ್ಲಿ ಸೈಯ್ಯದ್ ಷಾಹ್ ಅಬ್ದುಲ್ ಖಾದರ್ ಖಾದ್ರಿ ಉರ್ಪ್ ಮುಕ್ತಿಯರ್ ಸಾಹಿಬ್, ಸೈಯದ್ ಮುನ್ನಾಸಾಹೇಬ್ ಖಾದ್ರಿ, ಸೈಯ್ಯದ್ ಉಮೇಶ್ ಸಾಹೇಬ್ ಖಾದ್ರಿ, ಮಸೀದಿಗಳ ಪೇಶ ಇಮ್ಮಮ್ ರುಗಳು, ಖದೀಮ ಸುನ್ನಿ ಈದ್ಗಾ ಮೈದಾನದ ಅಧ್ಯಕ್ಷರಾದ ಎಂ. ಇಸ್ಮಾಯಿಲ್, ಉಪಾಧ್ಯಕ್ಷ ಮೆಹೆಬೂಬ್, ಕಾರ್ಯದರ್ಶಿ ಬಿ. ಜಾಫರ್ ಸಾಧಿಕ್, ಸಹ ಕಾರ್ಯದರ್ಶಿ ನೂರ್ ಅಹಮ್ಮದ್, ಖಜಾಂಜಿ ಲಡ್ಡು ಅಬ್ದುಲ್ ಕರೀಮ್, ಸದಸ್ಯರುಗಳಾದ ಮಾಬುಸಾಬ್, ನಜೀರ್, ಖಲಿಲ್, ಪಂಜು ಮೈನುದ್ದಿನ್,ರಿಯಾಜ್ ಸಂಡೂರ್ ಅಸಿಫ್, ಸೇರಿದಂತೆ ಮುಸ್ಲಿಂ ಸಮಾಜದ ಹಿರಿಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

# ಬಸನಗೌಡ ದದ್ದಲ್ ಅವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ – ಯುವ ಕಾಂಗ್ರೆಸ್ ಅಧ್ಯಕ್ಷ ಲಿಂಗಣ್ಣ ನಾಯಕ ಹವಾಲ್ದಾರ್ ಆಗ್ರಹ

ನೈಜ್ಯ ದೆಸೆ ನ್ಯೂಸ್



ದೇವದುರ್ಗ ಮೇ 31 : ದೇವದುರ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ದೇವದುರ್ಗ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಲಿಂಗಣ್ಣ ನಾಯಕ ಹವಾಲ್ದಾರ್ ಅವರು, ರಾಜ್ಯ ಸರ್ಕಾರದಲ್ಲಿ ಬಸನಗೌಡ ದದ್ದಲ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಸನಗೌಡ ದದ್ದಲ್ ಅವರು ಪಕ್ಷದ ನಿಷ್ಠಾವಂತ ನಾಯಕರು ಆಗಿದ್ದು, ಜನಪರ ಕೆಲಸಗಳ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವಲ್ಲಿ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ಅವರ ರಾಜಕೀಯ ಅನುಭವ, ಸಂಘಟನಾ ಸಾಮರ್ಥ್ಯ ಹಾಗೂ ಪಕ್ಷದ ಮೇಲಿನ ನಿಷ್ಠೆಯನ್ನು ಪರಿಗಣಿಸಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹೈಕಮಾಂಡ್ ಅವರು ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರು.ಬಸನಗೌಡ ದದ್ದಲ್ ಅವರಿಗೆ ಸಚಿವ ಸ್ಥಾನ ನೀಡಿದರೆ ರಾಯಚೂರು ಜಿಲ್ಲೆ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದೆ ಎಂದು ಲಿಂಗಣ್ಣ ನಾಯಕ ಹವಾಲ್ದಾರ್ ಅಭಿಪ್ರಾಯಪಟ್ಟರು.ಪಕ್ಷದ ಕಾರ್ಯಕರ್ತರ ಆಶಯವೂ ಇದೇ ಆಗಿದ್ದು, ಶೀಘ್ರದಲ್ಲೇ ಅವರಿಗೆ ಸಚಿವ ಸ್ಥಾನ ನೀಡುವಂತೆ ಮನವಿ ಮಾಡಿದರು.

# ವಿದ್ಯುತ್ ಖಾಸಗೀಕರಣಕ್ಕೆ ಸಿಪಿಐ(ಎಂ) ತೀವ್ರ ವಿರೋಧ

## ಟಾಟಾ ಪವರ್ ಅರ್ಜಿ ತಿರಸ್ಕರಿಸುವಂತೆ ಕೆಇಆರ್‌ಸಿ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್



ದೇವದುರ್ಗ : ರಾಜ್ಯದ ವಿದ್ಯುತ್ ವಿತರಣಾ ಕ್ಷೇತ್ರಕ್ಕೆ ಖಾಸಗಿ ಕಂಪನಿಗಳ ಪ್ರವೇಶ ಕಲ್ಪಿಸುವ ಪ್ರಯತ್ನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತೀವ್ರ ವಿರೋಧ ವ್ಯಕ್ತಪಡಿಸಿದೆ. ರಾಜ್ಯದ 15 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಿ ಟಾಟಾ ಪವರ್ ಕಂಪನಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಸಲ್ಲಿಸಿರುವ ಅರ್ಜಿಯನ್ನು ತಕ್ಷಣವೇ ತಿರಸ್ಕರಿಸಬೇಕೆಂದು ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ನರಸಣ್ಣ ನಾಯಕ ಆಗ್ರಹಿಸಿದ್ದಾರೆ.ಬೆಸ್ಕಾಂ, ಮೆಸ್ಕಾಂ, ಸೆಸ್ಕಾಂ ಹಾಗೂ ಹೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಪಡೆಯಲು ಟಾಟಾ ಪವರ್ ಕಂಪನಿ ಮುಂದಾಗಿರುವುದು ರಾಜ್ಯದ ಸಾರ್ವಜನಿಕ ವಿದ್ಯುತ್ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ಸಂಚಿನ ಭಾಗವಾಗಿದೆ ಎಂದು ಪಕ್ಷ ಆರೋಪಿಸಿದೆ. 2003ರ ವಿದ್ಯುತ್ ಕಾಯ್ದೆಯ ಸೆಕ್ಷನ್ 14 ಮತ್ತು 15ರ ಅಡಿಯಲ್ಲಿ ಸಲ್ಲಿಸಿರುವ ಈ ಅರ್ಜಿ ಭವಿಷ್ಯದಲ್ಲಿ ಕಾರ್ಪೊರೇಟ್ ಕಂಪನಿಗಳ ಪ್ರಭಾವವನ್ನು ಹೆಚ್ಚಿಸುವ ಅಪಾಯವನ್ನು ಹೊಂದಿದೆ ಎಂದು ಸಿಪಿಐ(ಎಂ) ತಿಳಿಸಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿದ್ಯುತ್ ತಿದ್ದುಪಡಿ ಮಸೂದೆಗಳ ಪರಿಣಾಮವಾಗಿ ವಿದ್ಯುತ್ ಉತ್ಪಾದನೆ, ಸಾಗಾಣಿಕೆ ಮತ್ತು ವಿತರಣಾ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಲಾಗುತ್ತಿದೆ. ಒಂದೇ ಪ್ರದೇಶದಲ್ಲಿ ಹಲವು ವಿತರಣಾ ಕಂಪನಿಗಳಿಗೆ ಅವಕಾಶ ನೀಡುವ ಕ್ರಮದಿಂದ ವಿದ್ಯುತ್ ದರ ಏರಿಕೆ, ಕ್ರಾಸ್ ಸಬ್ಸಿಡಿ ರದ್ದು ಹಾಗೂ ರಾಜ್ಯಗಳ ವಿದ್ಯುತ್ ಸ್ವಾಯತ್ತತೆ ಕುಂಠಿತಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷ ಅಭಿಪ್ರಾಯಪಟ್ಟಿದೆ.ಸಾರ್ವಜನಿಕ ವಿದ್ಯುತ್ ಕ್ಷೇತ್ರವು ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡುವ ಹೊಣೆಗಾರಿಕೆಯನ್ನು ಹೊಂದಿದ್ದು, ಖಾಸಗಿ ಕಂಪನಿಗಳ ಪ್ರವೇಶದಿಂದ ಗೃಹ ಬಳಕೆದಾರರು, ರೈತರು, ಪಂಪ್‌ಸೆಟ್‌ದಾರರು, ಸಣ್ಣ ಕೈಗಾರಿಕೆಗಳು ಹಾಗೂ ಕಾರ್ಮಿಕ ವರ್ಗ ಸಂಕಷ್ಟಕ್ಕೆ ಸಿಲುಕುವ ಅಪಾಯವಿದೆ ಎಂದು ಪಕ್ಷ ಎಚ್ಚರಿಸಿದೆ. ಜೊತೆಗೆ ವಿದ್ಯುತ್ ಇಲಾಖೆಯ ಉದ್ಯೋಗಿಗಳ ಭವಿಷ್ಯದ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಆದ್ದರಿಂದ ರಾಜ್ಯ ಸರ್ಕಾರ ಮತ್ತು ಕೆಇಆರ್‌ಸಿ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಟಾಟಾ ಪವರ್ ಕಂಪನಿಯ ಅರ್ಜಿಯನ್ನು ತಿರಸ್ಕರಿಸಿ, ವಿದ್ಯುತ್ ವಿತರಣಾ ಕ್ಷೇತ್ರವನ್ನು ಸಂಪೂರ್ಣವಾಗಿ ಸಾರ್ವಜನಿಕ ವಲಯದಲ್ಲಿಯೇ ಉಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

# ತೊರಣದಿನ್ನಿ;ದೇಶಭಕ್ತ ದೇವರಾಜ ನಾಯಕ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ

ನೈಜ್ಯ ದೆಸೆ ನ್ಯೂಸ್



ಮಸ್ಕಿ: ತಾಲ್ಲೂಕಿನ ತೋರಣದಿನ್ನಿ ಗ್ರಾಮದಲ್ಲಿ ದೇಶಭಕ್ತ ದೇವರಾಜ್ ನಾಯಕ್ ಸುಂಕರ್ನೂರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸ್ವಾಮಿ ವಿವೇಕಾನಂದ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೈಯಾದ್ರಿ ವಿವಿದ್ದೋಷ ಸಂಘದ ಅಧ್ಯಕ್ಷರಾದ ಕೇಶವ ಜೀ ಪಾಲ್ಗೊಂಡು ದೇವರಾಜ್ ನಾಯಕ್ ನಮ್ಮೊಡನೆ ಇಲ್ಲ ಸಮಾಜಕ್ಕೆ ಒಂದು ಮಾಡಿದ ಕಾರ್ಯ ಕೊಡುಗೆ ಅದ್ಭುತವಾಗಿದೆ ದೇವರಾಜ್ ನಾಯಕನ ಸ್ಮರಣಾರ್ಥಕವಾಗಿ ಇಂಥ ಪುಣ್ಯದ ಕಾರ್ಯಕ್ರಮವನ್ನು ಹಮ್ಮಿಕೊಂಡ ತೋರಣದಿನ್ನಿ ಗೆಳೆಯರ ಬಳಗದ ಕಾರ್ಯ ಶ್ಲಾಘನೀಯ ಎಂದು ಹೇಳಿದರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳು ಮಾತನಾಡಿದ ವಿಶ್ವನಾಥ್ ಪಟೇಲ್ ತೋರಣದಿನ್ನಿ ಅವರು ಯುವಕರು ದೇಶ ಕಟ್ಟುವ ಕೆಲಸವನ್ನು ಮಾಡಬೇಕು ದುಶ್ಚಟಗಳ ದಾಸರಾಗಬೇಡಿ, ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸಿ ಎಂದು ಹೇಳಿದರು ಇದೇ ಸಂದರ್ಭದಲ್ಲಿ ವೈಯೋ ನಿ ವೃತ್ತಿ ಹೊಂದಿದ ಸರಕಾರಿ ಪ್ರೌಢಶಾಲೆ ತೋರಣದಿನ್ನಿ ಮುಖ್ಯ ಗುರುಗಳಾದ ಮಲ್ಲಪ್ಪ ಅವರಿಗೆ ತೋರಣದಿನ್ನಿಯ ಗೆಳೆಯರ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸೋಮಶೇಖರ ಜೀ,ಪಿಎಸೈ ಗುರುಚಂದ್ರ ಯಾದವ ಹಾಗೂ ಮುಂತಾದ ಗಣ್ಯರು,ಗ್ರಾಮಸ್ಥರು ಉಪಸ್ಥಿತರಿದ್ದರು.